بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِهِ الْكَرِيْمِ    وَعَلٰی عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

**ವರ್ಷ: 04**

**ಸಂಚಿಕೆ: 36**

**ವಾರ್ಷಿಕ ಶುಲ್ಕ ರೂ.600/–**

**ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.**

**07 ಸೆಪ್ಟೆಂಬರ್ 2023, 07 ತಬೂಕ್ 1402 ಹಿಜರಿ ಶಮ್ಸಿ,**
**20 ಸಫರ್ 1445 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

وَمَنْ كَانَ
فِيْ هٰذِهٖٓ اَعْمٰى
فَهُوَ فِي الْاٰخِرَةِ اَعْمٰى
وَاَضَلُّ سَبِيْلًا

(ಬನೀ ಇಸ್ರಾಈಲ್: 73)

**ಅಂದರೆ: ಯಾರು ಇಹಲೋಕದಲ್ಲಿ ಅಂಧನಾಗಿರುವನೋ ಅವನು ಪರಲೋಕದಲ್ಲೂ ಅಂಧನಾಗುವನು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ಮೃದುವಾಗಿ ವಿನಂತಿಸಲು

**(2391)** ಹ಼ಝ್ರತ್ ಹುಝೈಫ(ರ) ವರದಿ ಮಾಡುತ್ತಾರೆ ನಾನು ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರಿಂದ ಹೀಗೆ ಕೇಳಿದೆ. ಅವರು(ಸ) ಹೇಳುತ್ತಿದ್ದರು: ಒಬ್ಬ ವ್ಯಕ್ತಿ ಮರಣ ಹೊಂದಿದನು ಮತ್ತು ಆತನನ್ನು ನೀನು ಏನು ಮಾಡುತ್ತಿದ್ದೆ? ಎಂದು ಕೇಳಲಾಯಿತು. ಅದಕ್ಕೆ ಆತನು ಉತ್ತರಿಸಿದನು: ನಾನು ಜನರೊಂದಿಗೆ ವ್ಯಾಪಾರ ಮಾಡುತ್ತಿದ್ದೆ ಮತ್ತು ಶ್ರೀಮಂತರಿಗೆ ವಿಶ್ರಾಂತಿ ನೀಡುತ್ತಿದ್ದೆ ಮತ್ತು ನಿರ್ಗತಿಕರನ್ನು ಕ್ಷಮಿಸುತ್ತಿದ್ದೆ, ಆದ್ದರಿಂದ ಅವನು ಕ್ಷಮಿಸಲ್ಪಟ್ಟನು.

ಹ಼ಝ್ರತ್ ಅಬು ಮಸ್‌ಊದ್(ರ) ಹೇಳಿದರು: ನಾನು ಸಹ ಪ್ರವಾದಿ(ಸ) ಅವರಿಂದ ಇದನ್ನು (ಹದೀಸ್) ಕೇಳಿದೆ.

### ಒಳ್ಳೆಯ ಜನರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ

**(2392)** ಹ಼ಝ್ರತ್ ಅಬೂಹುರೈರ(ರ) ವರದಿ ಮಾಡುತ್ತಾರೆ ಒಬ್ಬ ವ್ಯಕ್ತಿ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಬಳಿಗೆ ಬಂದು ಒಂಟೆಯನ್ನು ಕೇಳಿದನು. ರಸೂಲುಲ್ಲಾಹ್(ಸ) ಹೇಳಿದರು: ಆತನನ್ನು ನೀಡಿರಿ. ಅದಕ್ಕೆ ಸಹಾರವರು ಹೇಳಿದರು: ನಮಗೆ ಆತನ ಒಂಟೆಯ ವಯಸ್ಸಿನಿಂದ ಹಿರಿಯಾರ ವಯಸ್ಸಿನ ಒಂಟೆ ಕಾಣುತ್ತಿವೆ. ಅದಕ್ಕೆ ಆ ವ್ಯಕ್ತಿ ಹೇಳಿದನು: ನೀವು(ಸ) ನನಗೆ ಉತ್ತಮವಾಗಿಯೇ ನೀಡಿರೀ. ಅದಕ್ಕೆ ರಸೂಲುಲ್ಲಾಹ್(ಸ) ರವರು ಹೇಳಿದರು: ಅವನಿಗೆ (ಅದೇ ಒಂಟೆಯನ್ನು) ನೀಡಿರಿ, ಏಕೆಂದರೆ ಒಳ್ಳೆಯ ಜನರು ತಮ್ಮ ಸಾಲವನ್ನು ಉತ್ತಮ ರೀತಿಯಲ್ಲಿ ಪಾವತಿಸುತ್ತಾರೆ.

**(ಸಾಹೀಹ್ ಬುಖಾರಿ, ಸಂಪುಟ–4, ಕಿತಾಬ್ ಅಲ್–ಇಸ್ತಿಕ್ರಾತ್, 2008 ಖಾದಿಯಾನ್ ಪ್ರಕಟಿತ)**


**MUSLIM TELEVISION AHMADIYYA INTERNATIONAL**
**www.mta.tv**


ನನಗೆ ನನ್ನ ಸಮುದಾಯದಲ್ಲಿ ಒಂದು ಪವಿತ್ರ ಬದಲಾವಣೆಯಾಗಬೇಕೆಂಬ ಹಂಬಲ ಉತ್ಸುಕತೆ ಇರುತ್ತದೆ.

ನೀವು ಒಬ್ಬ ಹೊಸ ಮನುಷ್ಯರಾಗಿದ್ದೀರಿ ಎಂಬ ಮಟ್ಟಕ್ಕೆ ತಮ್ಮೊಳಗೆ ಬದಲಾವಣೆಯನ್ನು ಸೃಷ್ಟಿಸಿಕೊಳ್ಳಬೇಕು.
ಅದಕ್ಕಾಗಿ ಈ ರಹಸ್ಯ ನೀವು ತಿಳಿದುಕೊಳ್ಳುವುದು ತುಂಬಾ ಅನಿವಾರ್ಯವಾಗಿದೆ. ನಾನು ಬೇರೆಯೇ ವ್ಯಕ್ತಿಯಾಗಿದ್ದೇನೆ ಎಂಬ ಮಟ್ಟಕ್ಕೆ ಬದಲಾವಣೆ ಹೊಂದಬೇಕಾಗಿದೆ.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನನಗೆ ನನ್ನ ಸಮುದಾಯದಲ್ಲಿ ಒಂದು ಪವಿತ್ರ ಬದಲಾವಣೆಯಾಗಬೇಕೆಂಬ ಹಂಬಲ ಉತ್ಸುಕತೆ ಇರುತ್ತದೆ. ಯಾವ ಬದಲಾವಣೆಯ ನಿರೀಕ್ಷೆ ತಮ್ಮ ಜಮಾಅತಿಗೊಸ್ಕರ ನನ್ನ ಮನಸ್ಸಿನಲ್ಲಿದೆಯೋ ಅದು ಇನ್ನು ಹುಟ್ಟಲಿಲ್ಲ, ಈ ಸ್ಥಿತಿಯನ್ನು ಕಂಡು ನನ್ನ ಅವಸ್ಥೆ ಅದೇ ಆಗಿದೆ. **ಲಅಲ್ಲಕ ಬಾಖಿಉನ್ ನಫ್ಸಕ ಅಲ್ಲ ಯಕೂನೂ ಮುಮಿನೀನ್** (ಅಶುಅ್‌ರಾಅ್:4) ಬೈಅತ್ ಮಾಡುವ ಸಮಯದಲ್ಲಿ ಗಿಳಿಯ ಹಾಗೆ, ಕೆಲವು ಶಬ್ಧಗಳನ್ನು ಉಚ್ಚರಿಸುವುದನ್ನು ಮಾತ್ರ ನಾನು ಬಯಸುವುದಿಲ್ಲ ಇದರಿಂದ ಏನೂ ಉಪಯೋಗವಿಲ್ಲ. ಮನಃಶುದ್ಧಿಯ ಜ್ಞಾನವಿರಲಿ ಅದೇ ಅವಶ್ಯಕವಾಗಿದೆ. ಮಸೀಹರ ಮರಣ ಅಥವಾ ಜೀವಿತದ ಬಗ್ಗೆ ಚರ್ಚೆ ತರ್ಕ ಮಾಡುತ್ತಾ ಹೋಗುವುದು ನಮ್ಮ ಉದ್ದೇಶವಲ್ಲ, ಇದೊಂದು ಸಣ್ಣ ವಿಷಯವಾಗಿದೆ. ಅದಕ್ಕೆ ಅಂಟಿಕೊಳ್ಳಬಾರದು. ಅದೊಂದು ತಪ್ಪುಗ್ರಹಿಕೆಯಾಗಿತ್ತು. ಅದನ್ನು ಸರಿಪಡಿಸಲಾಗಿದೆ. ಆದರೆ ನಮ್ಮ ಕಾರ್ಯ ನಮ್ಮ ಧ್ಯೇಯ ಅದಕ್ಕಿಂತ ಮಹತ್ವದ್ದಾಗಿದೆ, ಅದೇನೆಂದರೆ ನೀವು ಒಂದು ಹೊಸ ಮನುಷ್ಯರಾಗಿದ್ದೀರಿ ಎಂಬ ಮಟ್ಟಕ್ಕೆ ಒಂದು ಪವಿತ್ರ ಬದಲಾವಣೆಯನ್ನು ತಮ್ಮೊಳಗೆ ಸೃಷ್ಟಿಸಿಕೊಳ್ಳಿ. ಆ ಪ್ರತಿಯೊಬ್ಬರು ಈ ರಹಸ್ಯ ಅರಿತುಕೊಳ್ಳುವುದು ಅವಶ್ಯಕವಾಗಿದೆ. ನೀವು ಇನ್ನೊಬ್ಬರಿಗೆ ಹೇಳುವಂತಾಗಬೇಕು. ನಾವು ಮೊದಲಿನ ಹಾಗೆ ಇಲ್ಲ, ಒಂದು ಹೊಸ ಪರಿವರ್ತನೆ ನಮ್ಮಲ್ಲಿ ಉಂಟಾಗಿದೆ ಎಂದು ಹೇಳಿಕೊಳ್ಳುವಂತಾಗಬೇಕು. ನಾನು ಮತ್ತೊಮ್ಮೆ ಹೇಳುತ್ತೇನೆ, ನಿಶ್ಚಿತವಾಗಿಯೂ, ನಿಜವಾಗಿಯೂ ಒಂದು ಅವಧಿಯವರೆಗೆ ನಮ್ಮ ಸಹವಾಸದಲ್ಲಿದ್ದು ಪರಿವರ್ತನೆ ಹೊಂದಿ ಮಾದರಿಯಾಗುದಿಲ್ಲವೋ, ಅಲ್ಲಿಯವರೆಗೆ ಯಾವ ಪ್ರಯೋಜನವೂ ಆಗದು, ಸ್ವಭಾವ, ಬೌದ್ಧಿಕ ಸ್ಥಿತಿ ಮತ್ತು ಭಾವನೆಗಳಲ್ಲಿ ಉನ್ನತ ಮಟ್ಟದ ಪಾರದರ್ಶಕತೆ ಉಂಟಾದರೆ, ಒಂದು ಮಾತಾಗಿರುತ್ತದೆ. ಇಲ್ಲದಿದ್ದರೆ ಏನೂ ಪ್ರಯೋಜನವಿಲ್ಲ. ಇದರ ಅರ್ಥ ಲೌಕಿಕ ಜೀವನ, ಸಂಸಾರ ತ್ಯಜಿಸಬೇಕೆಂಬುದು ಅಲ್ಲ, ಅಲ್ಲಾಹನು ಲೌಕಿಕ ಸಂಸಾರವನ್ನು ಧರ್ಮಸಮ್ಮತಗೊಳಿಸಿದ್ದಾನೆ. ಏಕೆಂದರೆ ಈ ಮಾರ್ಗದಿಂದಲೂ ಆಪತ್ತುಗಳು ಬರುತ್ತವೆ ಮತ್ತು ಈ ಆಪತ್ತುಗಳ ಕಾರಣದಿಂದಲೇ ಮನುಷ್ಯನು ಕಳ್ಳತನ, ಜೂಜಾಟ, ವಂಚನೆ, ಲೂಟಿಕೋರನಾಗುತ್ತಾನೆ, ಇನ್ನೇನೋ ಕೆಟ್ಟ ಅಭ್ಯಾಸಗಳನ್ನು ಒಪ್ಪಿಕೊಳ್ಳುತ್ತಾನೆ, ಆದರೆ ಪ್ರತಿಯೊಂದಕ್ಕೂ ಒಂದು ಮಿತಿಯಿರುತ್ತದೆ. ಧರ್ಮದ ಮಾರ್ಗದಲ್ಲಿ ಸಹಾಯಕವಾಗುವಂತಹ ರೀತಿಯಲ್ಲಿ ಸಂಸಾರವನ್ನು ನಡೆಸಿರಿ, ಅದರಲ್ಲೂ ಧರ್ಮವೇ ನಿಮ್ಮ ಧ್ಯೇಯವಾಗಿರಬೇಕು, ಆದ್ದರಿಂದ ನಾವು ಲೌಕಿಕ ಕಾರ್ಯಗಳಿಂದ ನಿಮ್ಮನ್ನು ತಡೆಯುವುದಿಲ್ಲ, ಆದರೆ ಹಗಲಿರುಳು ಲೌಕಿಕ ಕಾರ್ಯಗಳಲ್ಲಿಯೇ ಮುಳುಗಿ ಅಲ್ಲಾಹನ ವಿಷಯ

***(ಪುಟ ಸಂಖೆ 09 ರಲ್ಲಿ ಮುಂದುವರಿಸಲಾಗಿದೆ)***

### ***128 ನೇ ಜಲ್ಸಾ ಸಾಲಾನ ಖಾದಿಯಾನ್ 29, 30, 31 ಡಿಸೆಂಬರ್ 2023ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 128ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 29, 30 ಮತ್ತು 31ನೇ ಡಿಸೆಂಬರ್ 2023 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.** **(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

**"ಮುಜ್‌ಕೋ ಕಾಫಿರ್ ಕಹ್‌ಕೆ ಅಪ್ನೆ ಕುಫ್ರ್ ಪರ್ ಕರ್ತೆ ಹೈಂ ಮುಹರ್ ಎ ತೋ ಹೈ ಸಬ್ ಶಕಲ್ ಉನ್‌ಕೀ ಹಮ್ ತೋ ಹೈಂ ಆಯಿನಾದಾರ್॥"**

ಅನುವಾದ: ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದು ಘೋಷಿಸಿ ಸ್ವಯಂ ತನ್ನ ಅವಿಶ್ವಾಸವನ್ನು ದೃಢೀಕರಿಸುತ್ತಿದ್ದಾರೆ. ಇವೆಲ್ಲವು ಅವರ ಕಾರಸ್ತಾನವಾಗಿದೆ, ನವು ಕನ್ನಡಿಯಾಗಿದ್ದೇವೆ ಅಷ್ಟೇ.

——————(ಹಝ್ರತ್ ಮಸೀಹ್ ಮೌಊದ್(ಅಲೈಹಿಸ್ಸಲಾಮ್))

## ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಮೇಲೆ "ಮುನ್ಸಿಫ್" ಹೈದರಾಬಾದ್ ಪತ್ರಿಕೆ ಮಾಡಿರುವ ಆಕ್ಷೇಪಣೆಗಳಿಗೆ ಉತ್ತರ.

ಇತ್ತೀಚಿನ ದಿನಗಳಲ್ಲಿ ಆಂಧ್ರಪ್ರದೇಶದ ವಕ್ಫ್ ಬೋರ್ಡ್ ಅಹ್ಮದಿಯರು ಮುಸ್ಲಿಮರಲ್ಲ ಎಂದು ಹೇಳಿಕೆ ನೀಡಿದ್ದು, ಅಲ್ಲದೇ ಅಹ್ಮದಿಯಾ ಮುಸ್ಲಿಮ್ ಜಮಾಅತನ್ನು ಮುಸ್ಲಿಮೇತರರು ಎಂದು ಘೋಷಿಸಲಾಗಿದೆ. ಅದಕ್ಕೆ ಕೇಂದ್ರ ಅಲ್ಪಸಂಖ್ಯಾತ ಕಲ್ಯಾಣ ಖಾತೆಯ ಸಚಿವೆ ಸ್ಮೃತಿ ಇರಾನಿ 26 ಜುಲೈ 2023 ಬುಧವಾರ ಆಂಧ್ರ ವಕ್ಫ್ ಬೋರ್ಡ್‌ನ ಈ ನಿಲುವನ್ನು ತಪ್ಪೆಂದು ಸಾರುತ್ತಾ ಯಾವುದೇ ರಾಜ್ಯದ ವಕ್ಫ್ ಬೋರ್ಡ್‌ಗೆ, ಯಾವುದೆ ವ್ಯಕ್ತಿ ಅಥವಾ ಸಮುದಾಯವನ್ನು ಧರ್ಮದಿಂದ ಹೊರಗಿಡುವ ಅಧಿಕಾರವಿಲ್ಲ. ಈ ಬಗ್ಗೆ ವಿವಿಧ ಪತ್ರಿಕೆಗಳು ವಕ್ಫ್ ಬೋರ್ಡ್‌ನ ಪರವಾಗಿ ಮತ್ತು ಅಹ್ಮದಿಯಾ ಜಮಾಅತಿನ ವಿರುದ್ಧ ಏನೇನೆಲ್ಲ ಬರೆದಿದ್ದಾರೆ. "ಮುನ್ಸಿಫ್" ಹೈದರಾಬಾದ್ ಪತ್ರಿಕೆಯು ತನ್ನ 25 ಜುಲೈ ಸಂಪಾದಕೀಯದಲ್ಲಿ ಮತ್ತು ಅದೇ ರೀತಿಯಲ್ಲಿ ಜಮೀಅತ್ ಉಲಮಾ ಹಿಂದ್ ತನ್ನ ಪತ್ರಿಕಾಗೋಷ್ಠಿಯಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ವಾಗ್ದತ್ತ ಮಸೀಹ ಹಾಗೂ ವಾಗ್ದತ್ತ ಮಹದಿ(ಅ)ರ ಮೇಲೆ ಮಾಡಲಾದ ಆರೋಪಗಳನ್ನು ನಾವು ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ನಾವು ಹೇಳಿದ್ದೆವು. ಎಲ್ಲಾ ಆಕ್ಷೇಪಣೆಗಳಿಗೆ ಸವಿವರವಾಗಿ ಮತ್ತು ಕ್ರಮಾನುಸಾರವಾಗಿ ಉತ್ತರ ನೀಡುವೆವು ಎಂದು. ಮೊದಲು ನಾವು "ಮುನ್ಸಿಫ್" ಹೈದರಾಬಾದ್ ಪತ್ರಿಕೆಯ ಆಕ್ಷೇಪಣೆಗಳಿಗೆ ಉತ್ತರ ನೀಡುತ್ತೇವೆ. ಮುನ್ಸಿಫ್ ಪತ್ರಿಕೆ ಬರೆಯುತ್ತದೆ:

* "ಜಮೀಅತ್ ಉಲಮಾಯ ಹಿಂದ್, ಜಮಾಅತ್ ಇಸ್ಲಾಮಿ, ಜಮೀಅತ್ ಅಹ್ಲೆ ಹದೀಸ್, ಸುನ್ನಿ ಉಲಮಅ್ ಕೌನ್ಸಿಲ್ ವಿಶೇಷವಾಗಿ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ಇವರ ಹೊಣೆಗಾರಿಕೆಯಾಗಿರುತ್ತದೆ. ಅವರು ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಮತ್ತು ಅವರ ಅನುಯಾಯಿಗಳ ಇತರ ಧರ್ಮಗಳ ಸಂಬಂಧಿಸಿದವರ ವಿಶ್ವಾಸ ಮತ್ತು ಗತಕಾಲದಲ್ಲಿ ಬ್ರಿಟಿಷ್‌ನವರೊಂದಿಗೆ ಸೇರಿ ಹೂಡಿದ ಸಂಚುಗಳ ಬಗ್ಗೆ ತಿಳಿಸಬೇಕು.

ಇತರ ಧರ್ಮಗಳಿಗೆ ಸಂಬಂಧಿಸಿ ಅಹ್ಮದಿಯಾ ಜಮಾಅತ್ ಮತ್ತು ಅಹ್ಮದಿಯಾ ಜಮಾಅತಿನ ಸ್ಥಾಪಕರ ಏನು ವಿಶ್ವಾಸಗಳಿವೆ, ಅದೇ ರೀತಿಯಲ್ಲಿ ಅಹ್ಮದಿಯಾ ಜಮಾಅತ್ ಮತ್ತು ಅಹ್ಮದಿಯ ಜಮಾಅತಿನ ಸ್ಥಾಪಕರು ಬ್ರಿಟಿಷರೊಂದಿಗೆ ಸೇರಿ ಏನು ಸಂಚು ಹೂಡಿದ್ದರು? ಎಂಬ ಬಗ್ಗೆ ಸಂಪಾದಕರು ಯಾವ ಬೆಳಕನ್ನು ಕೂಡ ಚೆಲ್ಲಲಿಲ್ಲ, ಅದರಿಂದ ನಾವು ಉತ್ತರ ಕೊಡಬಹುದಾಗಿತ್ತು. ಇದೀಗ ಇಂತಹ ವ್ಯರ್ಥ ಮಾತುಗಳಿಗೆ ನಾವು ಏನು ಉತ್ತರ ನೀಡುವುದು. ಇಂತಹ ಅಸ್ಪಷ್ಟ ಮತ್ತು ಸುಳ್ಳು ಲೇಪಿತ ಮಾತುಗಳನ್ನು ಪ್ರತಿಯೊಬ್ಬ ನ್ಯಾಯೋಚಿತ ಮತ್ತು ವಿವೇಕಯುತ ವ್ಯಕ್ತಿಯು ಅಸಹ್ಯಪಡುವನು.

ಇತರ ಧರ್ಮಗಳಿಗೆ ಸಂಬಂದಿಸಿದಂತೆ ನಾವು ಎಲ್ಲ ಧರ್ಮಗಳು ದೇವನ ಕಡೆಯಿಂದ ಬಂದ ಧರ್ಮಗಳಾಗಿವೆ ಎಂದು ನಂಬುತ್ತೇವೆ. ಆದರೆ ಅವು ಕಾಲಕಳೆದಂತೆ ಕಲುಷಿತಗೊಂಡವು ಮತ್ತು ಮಾನವ ಹಸ್ತಕ್ಷೇಪಕ್ಕೆ ಗುರಿಯಾದವು. ಪವಿತ್ರ ಖುರ್‌ಆನ್‌ನ ಶಿಕ್ಷಣದನ್ವಯ ಎಲ್ಲಾ ಸಮುದಾಯಗಳಲ್ಲೂ, ಧರ್ಮಗಳಲ್ಲೂ ಅಲ್ಲಾಹನ ಕಡೆಯಿಂದ ಪ್ರವಾದಿಗಳು ಮತ್ತು ಸಂದೇಶವಾಹಕರು ಬಂದಿದ್ದರು ಎಂದು ತಿಳಿದುಬರುತ್ತದೆ. ಅಲ್ಲಾಹನು ಹೇಳುತ್ತಾನೆ.

**ವಲಿಕುಲ್ಲಿ ಉಮ್ಮತಿ ರಸೂಲುನ್** (ಯೂಸೂಫ್–48) ಮತ್ತು ಹೇಳುತ್ತಾನೆ. **ವಲಿಕುಲ್ಲಿ ಖೌಮಿನ್ ಹಾದ್** (ಅರ್ರಅದ್–8) ಪವಿತ್ರ ಖುರ್‌ಆನ್‌ನ ಈ ತತ್ವಾನುಸಾರವಾಗಿ ನಾವು ಶ್ರೀ ರಾಮ ಮತ್ತು ಶ್ರೀ ಕೃಷ್ಣರನ್ನು ಅಲ್ಲಾಹನ ಪ್ರವಾದಿಗಳು ಎಂದು ನಂಬುತ್ತೇವೆ. ಆದರೆ ನಮ್ಮ ಈ ವಿಶ್ವಾಸವನ್ನು ಅಹ್ಮದಿಯೇತರ ಗಣ್ಯರು ಬಹಳ ಕೆಟ್ಟದಾಗಿ ಮತ್ತು ಇಸ್ಲಾಮಿಗೆ ವಿರೋಧ ಎಂದು ಭಾವಿಸುತ್ತಿದ್ದರು. ಆದರೆ ಇದೀಗ ಅವರಿಂದಲೇ ಸ್ವರ ಬರತೊಡಗಿದೆ. ಇತರ ಧರ್ಮಗಳಿಗೆ ಸಂಬಂಧಿಸಿದ ಅವರೂ ಸಹ ಪ್ರವಾದಿಯಾಗಿದ್ದರು. ಅದೇ ರೀತಿಯಲ್ಲಿ ಜಿಹಾದ್ ವಿಷಯದಲ್ಲಿಯೂ ಸಹ ನಮ್ಮ ದೃಷ್ಟಿಕೋನವನ್ನು ಸಮ್ಮತಿಸುತ್ತಿದ್ದಾರೆ. ಮೊದಲು ಹೇಳುತ್ತಿದ್ದರು. ಅವಿಶ್ವಾಸಿಗಳೊಂದಿಗೆ ಜಿಹಾದ್ ಯಾವಾಗಲೂ ಕಡ್ಡಾಯವಾಗಿದೆ ಎಂದು. ಆದರೆ ಈಗ ಹಾಗೆ ಹೇಳುವ ಧೈರ್ಯ ಇಲ್ಲ. ಈಗ ಅವರು ಒಂದೇ ತಟ್ಟೆಯಲ್ಲಿ ಊಟ ಮಾಡುವ ಮಾತನಾಡುತ್ತಿದ್ದಾರೆ. ಆಗಲಿ ತಡವಾಗಿಯಾದರು ಸರಿ ಒಟ್ಟಿನಲ್ಲಿ ಒಂದು ದಿನ ನಮ್ಮನ್ನು ಅನುಸರಿಸಲೇ ಬೇಕಾಗುವುದು. ಇಸ್ಲಾಂ ನಮಗೆ ಉಪದೇಶ ನೀಡುತ್ತದೆ. ಎಲ್ಲ ಧರ್ಮಗಳನ್ನು ಮತ್ತು ಧರ್ಮ ನೇತಾರರನ್ನು ಹಾಗೆ ಧರ್ಮ ಸ್ಥಾಪಕರನ್ನು ಗೌರವಿಸಬೇಕು ಮತ್ತು ಜಾಣ್ಮೆಯಿಂದಲೂ ಪ್ರೀತಿಯಿಂದಲೂ ಅವರಿಗೆ ಇಸ್ಲಾಮಿನ ಸಂದೇಶ ತಲುಪಿಸಬೇಕಾಗಿದೆ. ಇತರ ಧರ್ಮಗಳೊಂದಿಗಿನ ತಮ್ಮ ಸಂಬಂಧ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಈಗ ಉಳಿದದ್ದು ಬ್ರಿಟಿಷರ ಜೊತೆಸೇರಿ ಸಂಚು ಹೂಡಿದ ಆರೋಪ, ನಾವು ಮೊದಲೇ ಹೇಳಿದಂತೆ ಸಂಪಾದಕರು ಈ ಪೈಕಿ ಯಾವ ಬೆಳಕು ಚೆಲ್ಲಲಿಲ್ಲ. ಅದು ಯಾವ ಸಂಚಾಗಿತ್ತು? ಎಂತಹ ಸಂಚಾಗಿತ್ತು ಎಂದು? ನಿಜವಾಗಿಯೂ ಸಂಚು ಹೂಡಿದ್ದೆ ಆಗಿದ್ದರೆ ಆ ಪೈಕಿ ಮಾಹಿತಿ ಸಾರ್ವಜನಿಕ ಆಗಬೇಕಿತ್ತು. ಮುನ್ಸಿಫ್ ಪತ್ರಿಕೆಯ ಸಂಪಾದಕರು ತಮ್ಮ ಓದುಗರಿಗೆ ಅದನ್ನು ಸ್ಪಷ್ಟಪಡಿಸಬೇಕಾಗಿತ್ತು! ಅದೆಲ್ಲಾ ಅವರು ಓದುಗರ ಮೇಲೆಯೇ ಬಿಟ್ಟು ಬಿಟ್ಟಿದ್ದಾರೆ. ಅವರಾಗಿಯೇ ಸಂಶೋಧಿಸುತ್ತಿರಲಿ ಎಂದು. ವಾಸ್ತವವೇನೆಂದರೆ ಇದೊಂದು ಅತ್ಯಂತ ಸುಳ್ಳು ಹಾಗೂ ಆಧಾರರಹಿತ ಆರೋಪವಾಗಿದೆ.

ಬ್ರಿಟಿಷರು ಮುಸ್ಲಿಮರ ಹೋರಾಟ ತಪ್ಪಿಸಲು ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಅವರನ್ನು ನಿಲ್ಲಿಸಿದರು ಮತ್ತು ನೀವು ಪ್ರವಾದಿತ್ವದ ವಾದ ಮಂಡಿಸಿ ಅದರಿಂದ ಮುಸಲ್ಮಾನರು ನಮ್ಮ ವಿರೋಧವನ್ನು ಬಿಟ್ಟು ನಿಮ್ಮ ಹಿಂದೆ ಬೀಳುವರು. ಅದರಿಂದ ನಮಗೆ ಒಂದಿಷ್ಟು ನೆಮ್ಮದಿ ದೊರೆಯಬಹುದು ಎಂದು ಹೇಳಿದರು ಎಂದು ಹೇಳಲಾಗುತ್ತದೆ. ಇದು ಅತ್ಯಂತ ಅರ್ಥಹೀನ ಆರೋಪವಾಗಿದೆ. ಅದು ಸುಳ್ಳಿನ ಹೊರತು ಮತ್ತೇನೂ ಅಲ್ಲ. ಈ ಆಕ್ಷೇಪದಲ್ಲಿ ಏನಾದರೂ ಸತ್ಯವಿರುತ್ತಿದ್ದರೆ ಖಂಡಿತವಾಗಿಯೂ ಅದಕ್ಕೆ ಪುರಾವೆಗಳನ್ನು ಒದಗಿಸುವುದು ಕಠಿಣ ಕೆಲಸವಾಗಿರಲಿಲ್ಲ. ಆದರೆ ನಾವು ನೋಡುತ್ತಿದ್ದೇವೆ. ಈ ಪೈಕಿ ಯಾವ ಸಾಕ್ಷ್ಯಗಳನ್ನು ಮುಂದಿಡುವುದಿಲ್ಲ. ಒಟ್ಟಿನಲ್ಲಿ ನಮಗೆ ವಿಷಾದಪೂರ್ವಕವಾಗಿ ಬರೆಯಬೇಕಾಗುತ್ತದೆ. ಯಾವ ರೀತಿ ಅವರ ಪುರ್ವಜರು ಮೌಲ್ವಿ ಸನಾವುಲ್ಲ ಅಮೃತ್ಸರಿ, ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಹಝ್ರತ್ ಮಸೀಹ್ ಮೌಊದ್(ಅ) ಅವರ ವಿರೋಧದಲ್ಲಿ ಹೇಗೆ ತಮ್ಮ ಜೀವನಪೂರ್ತಿ ಸುಳ್ಳು ಹೇಳುತ್ತಾ ಬಂದರು, ಇದೀಗ ಇವರದು ಕೂಡ ಅದೇ ಉದ್ಯೋಗವಾಗಿದೆ. ವಾಸ್ತವವೇನೆಂದರೆ ಸಾರ್ವಜನಿಕರಲ್ಲಿ ಸುಳ್ಳು ಹೇಳಬೇಕಾದುದು ಅವರ ವಿವಶಸನವಾಗಿದೆ. ಒಂದು ವೇಳೆ ಅವರು ಸತ್ಯವನ್ನು ಹೇಳಿದರೆ, ಅವರಿಗೆ ಅರಿವಿದೆ ಜನರು ಅಹ್ಮದಿಅತ್‌ನತ್ತ ಧಾವಿಸುವರು. ಆದರೂ ಸತ್ಯ ಸಮಯ ಸಮಯಕ್ಕೆ ಅವರ ನಾಲಿಗೆಯ ಮೇಲೆ ಬಂದೇ ಬಿಡುತ್ತದೆ. ಮೌಲಾನ ಒಬ್ಬರು ಯೂಟ್ಯೂಬ್ ಮೇಲೆ ಹಝ್ರತ್ ಮಸೀಹ್ ಮೌಊದ್(ಅ) ಅವರ ಕಪಟತನವನ್ನು ತಲೆತೂಗುತ್ತಾ ಉತ್ಸಾಹಭರಿತವಾಗಿ ಹಾಡಿದರು ಮತ್ತು ಅದರ ಅನುವಾದವನ್ನು ವಿವರಿಸಿದರು. ಅದು ಹಝ್ರತ್ ಪೈಗಂಬರ್(ಸ) ಅವರ ಸ್ತುತಿಯಲ್ಲಿ ಬರೆದ ಕವನವಾಗಿದೆ. ಏಕದೇವೋಪಾಸನೆಯ ಕುರಿತಾದ ವಾಗ್ದತ್ತ ಮಸೀಹ(ಅ) ರ ಸಾಹಿತ್ಯವು ಅತ್ಯುತ್ತಮ ಸಾಹಿತ್ಯವಾಗಿದೆ ಎಂದು ಧರ್ಮಗುರುಗಳೊಬ್ಬರು ಹೇಳಿದರು. ಅಹ್ಮದಿಯರಲ್ಲದ ವಿದ್ವಾಂಸರು ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಒಬ್ಬ ಶ್ರೇಷ್ಠ ದಾರ್ಶನಿಕ ಎಂದು ಒಪ್ಪಿಕೊಳ್ಳುತ್ತಾರೆ. ಅವರು ಆರ್ಯರು ಮತ್ತು ಕ್ರಿಸ್ತರೊಂದಿಗೆ ದೊಡ್ಡ ಚರ್ಚೆಗಳನ್ನು ನಡೆಸಿದರು ಮತ್ತು ವಿಜಯಶೀಲರಾದರು. ಪ್ರಶ್ನೆ ಉದ್ಭವಿಸುವುದೇನೆಂದರೆ, ಬ್ರಿಟಿಷರು ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ ಅವರನ್ನು ಬೆಳೆಸಿದುದು ಕ್ರಿಸ್ತ ಪಾದರಿಗಳು ಮತ್ತು ಧಾರ್ಮಿಕ ಮುಖಂಡರನ್ನು ಸೋಲಿಸಿ ಅವರ ಧರ್ಮ ಮಣ್ಣುಪಾಲು ಮಾಡಲೆಂದೆ? ಈ ಮಾತು ಒಪ್ಪತಕ್ಕದ್ದೆ? ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) ಅವರನ್ನು ಅಲ್ಲಾಹನು ಹಝುರತ್ ಪೈಗಂಬರ್(ಸ) ರವರ ಭವಿಷ್ಯವಾಣಿಗಳ ಅನುಸಾರವಾಗಿ ಈ ಕಾಲಘಟ್ಟದ ಮಸೀಹ್ ಮಹದಿಯಾಗಿ ಕಳುಹಿಸಿದ್ದನು. ವಾಗ್ದತ್ತ ಮಸೀಹರ ಶ್ರೇಷ್ಠ ಸ್ಥಾನವನ್ನು ಹೊಂದಿದ ಅವರು ಕ್ರಿಶ್ಚಿಯನ್ ನಂಬಿಕೆಗಳ ದೋಷಗಳನ್ನು ಶಕ್ತಿಯುತವಾಗಿ ವಿವರಿಸಿದರು ಮತ್ತು ಮುಂದಿನ ಸುಧಾರಣೆ ಹಾಗೂ ಮಾರ್ಗದರ್ಶನದಲ್ಲಿ ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸಿದರು. ಹೀಗಿರುವಾಗ ನೀವು ಬ್ರಿಟಿಷರೊಂದಿಗೆ ಮೈತ್ರಿ ಮಾಡಿಕೊಂಡಿರಬೇಕು ಎಂದುಕೊಳ್ಳಬಹುದೇ? ಅಂತಹ ಸಂದರ್ಭದಲ್ಲಿ ಬ್ರಿಟಿಷರು ನಿಮ್ಮೊಂದಿಗೆ ಮೈತ್ರಿ ಮಾಡಿಕೊಳ್ಳುವುದು ಹೇಗೆ? ಅದಾಗ್ಯೂ ಅವರು ಅವರ ಧರ್ಮವನ್ನು ಮಣ್ಣುಪಾಲು ಮಾಡಿದ್ದರು.

*(ಪುಟ ಸಂಖ್ಯೆ–11 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಅಲ್ಲಾಹನು ಎಲ್ಲ ರೀತಿಯಲ್ಲೂ ಈ ಜಲ್ಸವನ್ನು ಅನುಗ್ರಹೀತಗೊಳಿಸಿದನು. ಅಲ್ಲಾಹನು ಸದಾ ನಮ್ಮನ್ನು ವಿನಯವಂತ ಮತ್ತು ಕೃತಜ್ಞತೆಯುಳ್ಳ ದಾಸರನ್ನಾಗಿ ಮಾಡಿಕೊಂಡು ನಮ್ಮ ಸ್ವಂತ ಸುಧಾರಣೆ ಮಾಡುವವರನ್ನಾಗಿ ಮಾಡಲಿ.

ಸರ್ವಶಕ್ತನಾದ ಅಲ್ಲಾಹನು ನಮ್ಮ ದೌರ್ಬಲ್ಯಗಳನ್ನು ನಿರ್ಲಕ್ಷಿಸುತ್ತಾನೆ ಮತ್ತು ನಮ್ಮನ್ನು ತುಂಬಾ ಮತ್ತು ಎಂತಹ ರೀತಿಯಲ್ಲಿ ಅನುಗ್ರಹಿಸುತ್ತಾನೆ ಎಂದರೆ ನಾವು ಅವನ ಕೃತಜ್ಞತೆಯನ್ನು ಎಂದಿಗೂ ಮರುಪಾವತಿಸಲು ಸಾಧ್ಯವಿಲ್ಲ.

ಕೃತಜ್ಞತೆ ಅರ್ಪಿಸುವುದು ನಮ್ಮ ಕೆಲಸವಾಗಿದೆ. ಅಲ್ಲಾಹನ ಅನುಗ್ರಹಗಳು ವರ್ಷಿಸುವಾಗ ಅವನ ಮುಂದೆ ಬಾಗುತ್ತಾ ಇರಬೇಕಾದದ್ದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಾವು ಈ ಕರ್ತವ್ಯವನ್ನು ನಿರ್ವಹಿಸುವ ವರೆಗೂ ನಮ್ಮ ಹೆಜ್ಜೆ ಮುಂದಕ್ಕೆ ಹೋಗುತ್ತಾ ಇರುವುದು ಇನ್‌ಶಾ ಅಲ್ಲಾಹ್.

ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ......ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

ನನಗೆ ಪ್ರಭಾವಿತಗೊಳಿಸಿದ ಮೊದಲ ವಿಷಯವೇನೆಂದರೆ ಸಾವಿರಾರು ಜನರು ಒಂದೇ ಉದ್ದೇಶಕ್ಕಾಗಿ ಒಂದು ಸ್ಥಳದಲ್ಲಿ ಒಬ್ಬ ಧಾರ್ಮಿಕ ನಾಯಕನ ಸುತ್ತ ಒಟ್ಟಾಗಿರುವರು...... ಆದ್ದರಿಂದ ಅಹ್ಮದಿಯಾ ಜಮಾಅತಿನಲ್ಲಿ ಇರುವ ಖಿಲಾಫತ್ ವ್ಯವಸ್ಥೆಯಿಂದ ಲೋಕ ಪಾಠ ಕಲಿಯಬಹುದಾಗಿದೆ. (ಪ್ರೊ. ಡಾ॥ ಜಯಾಲೂರುಘಾಂ)

ನಾನು ನನ್ನ ಜೀವಿತದಲ್ಲಿ ಇಷ್ಟು ಶಾಂತಿಯುತ ಜನರನ್ನು ಕಂಡಿಲ್ಲ. ನಾನು ಇಲ್ಲಿ ನೋಡಿದ ಆಧ್ಯಾತ್ಮಿಕ ವಾತಾವರಣ, ಜನರ ಪರಸ್ಪರ ಪ್ರೀತಿ, ಉತ್ತಮ ವರ್ತನೆ ಖಂಡಿತವಾಗಿಯೂ ಶ್ಲಾಘನೀಯ. ನಿಸ್ಸಂದೇಹವಾಗಿ ಈ ಲೋಕದ ಭವಿಷ್ಯ ಅಹ್ಮದಿಯ್ಯತ್ ಆಗಿದೆ. (ಬೆಲೀಜ್ ನಗರದ ಮೇಯರ್)

ಇಲ್ಲಿ ಬಹಳ ಡಿಸಿಪ್ಲಿನ್ ಮತ್ತು ಪ್ರೀತಿಯ ವಾತಾವರಣವಿದೆ. ಎಲ್ಲ ಸ್ವಯಂ ಸೇವಕರು ವಿದ್ಯಾವಂತರು. ಅವರಲ್ಲಿ ಕೆಲವರು ಕನ್ಸಲ್‌ಟಂಟ್ ಆಗಿರುವರು. ಆದರೆ ಅವರು ಜಲ್ಸದಲ್ಲಿ ಕಾರ್ಪಂಟರಿ ಮತ್ತು ಶುಚಿಯ ಕೆಲಸಗಳನ್ನು ಮಾಡುತ್ತಿದ್ದರು. ಈ ಸ್ವಯಂಸೇವಕರ ಹೃದಯಗಳಲ್ಲಿ ಅಲ್ಲಾಹನ ಭಯ ಇಲ್ಲದಿರುತ್ತಿದ್ದರೆ ಎಂದಿಗೂ ಇಷ್ಟು ಗುಣಮಟ್ಟದ ಕೆಲಸವನ್ನು ಮಾಡಲಾರರು. (ಘಾನದ ಸ್ನೇಹಿತ ಮೈಕಲ್)

ಇಂತಹ ಮೌನ ತಬ್ಲೀಗ್ ಮಾಡುವ ಸೇವಕರು ಸೌಭಾಗ್ಯಶಾಲಿಗಳು.

ಬೇರೆ ಬೇರೆ ಸಂಸ್ಕೃತಿ, ಬಣ್ಣ, ಜನಾಂಗ ಇದ್ದರೂ ಎಲ್ಲರೂ ಒಂದೇ ಕುಟುಂಬದವರಂತೆ ಪರಸ್ಪರ ಬೆರೆಯುತ್ತಿದ್ದರು.... ನಾನು ಬಹಳಷ್ಟು ಧಾರ್ಮಿಕ ಪಂಡಿತರ ಭಾಷಣಗಳನ್ನು ಆಲಿಸಿದ್ದೇನೆ. ಆದರೆ ಎಲ್ಲರೂ ತಮ್ಮ ಬಗ್ಗೆಯೇ ಹೇಳುತ್ತಿರುತ್ತಾರೆ. ಆದರೆ ಖಲೀಫತುಲ್ ಮಸೀಹ್‌ರು ಅಲ್ಲಾಹನ, ಹಝ್ರತ್ ಪೈಗಂಬರ್(ಸ) ಅವರ ಮತ್ತು ಮಸೀಹ್ ಮೌಊದ್(ಅ)ರ ಮಾತುಗಳನ್ನು ಓದಿ ಹೇಳುತ್ತಿದ್ದರು. (ಜೋಯಲ್ ಟ್ಯುರೆನ್ನೆ)

ನಿಸ್ವಾರ್ಥವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ ಮತ್ತು ಶಿಸ್ತನ್ನು ಕಾಪಾಡಿದ ಸ್ವಯಂಸೇವಕರು ಇನ್ನೂ ಆಶ್ಚರ್ಯಕರವಾಗಿತ್ತು. ನಾನು ಗಮನಿಸಿದ ಇನ್ನೊಂದು ವಿಷಯವೆಂದರೆ ಜಮಾಅತ್ ಸದಸ್ಯರು ತಮ್ಮ ಇಮಾಮ್ ಜೊತೆಗಿನ ಪ್ರೀತಿಯ ಸಂಬಂಧವನ್ನು ಬೇರೆಲ್ಲಿಯೂ ಕಾಣುವುದಿಲ್ಲ. ಜಾತಿ-ಬಣ್ಣದ ಬೇಧವಿಲ್ಲದೆ ಎಲ್ಲರೂ ನಗುವ ಮುಖದಿಂದ ಭೇಟಿಯಾಗುವ ಅಹ್ಮದಿಯಾ ಜಮಾಅತ್ ನಲ್ಲಿ ಇಂದು ಭೂಮಿಯ ಮೇಲಿನ ನಿಜವಾದ ಭ್ರಾತೃತ್ವದ ಜೀವಂತ ಚಿತ್ರಣವಿದೆ ಎಂದು ಒಪ್ಪಿಕೊಳ್ಳದೆ ನಾನು ಉಳಿಯಲು ಸಾಧ್ಯವಿಲ್ಲ. (ಗ್ಯಾಂಬಿಯಾದ ಮಾಹಿತಿ ಸಚಿವ ಲ್ಯಾಮೈನ್ ಎಸ್ಐ ಜಾಮೆ)

ಜಾಗತಿಕ ಬೈಅತ್ ಸಮಾರಂಭವು ನಮ್ಮ ಆರಾಧನೆಯಂತೆಯೇ ಇದೆ, ಆದರೆ ಜಾಗತಿಕ ಬೈಅತ್ ಸಮಯದಲ್ಲಿ ನಾನು ಮಾಡಿದಂತಹ ಆಧ್ಯಾತ್ಮಿಕತೆಯನ್ನು ನನ್ನ ಆರಾಧನೆಯಲ್ಲಿ ನಾನು ಎಂದಿಗೂ ಅನುಭವಿಸಲಿಲ್ಲ. (ಕೆನಡಾದ ಸ್ಥಳೀಯ ರಾಷ್ಟ್ರದ ಉಪಾಧ್ಯಕ್ಷ ಅಲಿ ಬೇರ್)

**ಜಲ್ಸ ಸಾಲಾನ ಯು ಕೆ 2023ರಲ್ಲಿ ಭಾಗವಹಿಸಿದ ಅಹ್ಮದಿಯರು ಹಾಗೂ ಅಹ್ಮದಿಯೇತರ ಅತಿಥಿಗಳ ಅಭಿಪ್ರಯಗಳ ಪ್ರಸ್ತಾವನೆ ಹಾಗೂ ಮಾಧ್ಯಮಗಳ ಮುಖಾಂತರ ಜಲ್ಸ ಸಾಲಾನದ ಕವರೇಜ್**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ ಯ **'ಮಸ್ಜಿದ್ ಇಸ್ಲಾಮಬಾದ್'** ನಿಂದ **04-08-2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್ಲಾಹನ ಅನುಗ್ರಹದಿಂದ ಕಳೆದ ಜುಮಾದಿಂದ ರವಿವಾರ ತನಕ ಅಹ್ಮದಿಯಾ ಜಮಾಅತ್ ಯು.ಕೆ.ಯ ಜಲ್ಸ ಸಾಲಾನ ವಿಜಯಕರವಾಗಿ ಜರುಗಿತು. ಅಲ್‌ಹಮ್ದುಲಿಲ್ಲಾಹ್. ಈ ವರ್ಷದ ಹಾಜರಿಯೂ ಕಳೆದ ವರ್ಷಕ್ಕೆ ಹೋಲಿಸಿ ಬಹಳ ಅಧಿಕವಿತ್ತು.

ಇದಕ್ಕಾಗಿ ನಾವು ಅಲ್ಲಾಹನಿಗೆ ಎಷ್ಟು ಕೃತಜ್ಞತೆ ಅರ್ಪಿಸಿದರೂ ಕಡಿಮೆಯೇ ಅಲ್ಲಾಹನ ಅನುಗ್ರಹಗಳು ನಮ್ಮ ಜಲ್ಸದಲ್ಲಿ ಕೊನೆಯಿಲ್ಲದ ಅನುಗ್ರಹಗಳಿಂದ ತುಂಬಿದನು ಮತ್ತು ಇದನ್ನು ಅಹ್ಮದಿ ಅತಿಥಿಗಳಾಗಲಿ ಅಥವಾ ವಿವಿಧ ದೇಶಗಳಿಂದ ಬಂದ ಅಹ್ಮದೀಯೇತರ ಅತಿಥಿಗಳಾಗಲಿ ಎಲ್ಲರೂ ಅನುಭವಿಸಿದರು. ನಾವು ದುರ್ಬಲರು. ಅಲ್ಲಾಹನ ಅನುಗ್ರಹದಿಂದಲೇ ನಮ್ಮ ಕಾರ್ಯಗಳು ನಡೆಯುತ್ತವೆ ಮತ್ತು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದ ಸುರಿಮಳೆಯು ಜಮಾಅತ್‌ನ ಮೇಲೆ ಎಣಿಸಲು

ಅಸಾಧ್ಯವಾದ ರೀತಿಯಲ್ಲಿ ಸುರಿಯುತ್ತದೆ, ಅದನ್ನು ಲೆಕ್ಕಿಸಲು ಅಸಾದ್ಯ. ನಾವು ಅಲ್ಲಾಹನ ಈ ವಗ್ದಾನವು ಈಡೇರುವುದನ್ನು ದಿನನಿತ್ಯ ಕಾಣುತ್ತೇವೆ ಅಲ್ಲಾಹನು ನುಡಿಯುತ್ತಾನೆ **ವಇನ್ ತುಅದ್ದು ನಿಅ್‌ಮತಲ್ಲಾಹಿ ಲಾ ತುಹ್‌ಸೂಹಾ- ಇನ್ನಲ್ಲಾಹ ಲಗಫೂರುರಹರಹೀಮ್** (ಅನ್ನಹಲ್:19) ಅಂದರೆ ಅಲ್ಲಾಹನ ಅನುಗ್ರಹಗಳನ್ನು ನೀವು ಎಣಿಕೆ ಮಾಡಲಿಕ್ಕೆ ಪ್ರಯತ್ನಿಸಿದರೆ ಅವುಗಳನ್ನು ಎಣಿಕೆ ಮಾಡಲು ನಿಮ್ಮಿಂದ ಸಾಧ್ಯವಿಲ್ಲ, ದಿಟವಾಗಿಯೂ ಅಲ್ಲಾಹನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದಾನೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ನಮ್ಮ ದೌರ್ಬಲ್ಯಗಳನ್ನು ನಿರ್ಲಕ್ಷಿಸುತ್ತಾನೆ ಮತ್ತು ನಮ್ಮನ್ನು ತುಂಬಾ ಮತ್ತು ಎಂತಹ ರೀತಿಯಲ್ಲಿ ಅನುಗ್ರಹಿಸುತ್ತಾನೆ ಎಂದರೆ ನಾವು ಅವನ ಕೃತಜ್ಞತೆಯನ್ನು ಎಂದಿಗೂ ಮರುಪಾವತಿಸಲು ಸಾಧ್ಯವಿಲ್ಲ. ಆದ್ದರಿಂದ ಕೃತಜ್ಞತೆ ಅರ್ಪಿಸುವುದು ನಮ್ಮ ಕೆಲಸವಾಗಿದೆ. ಅಲ್ಲಾಹನ ಅನುಗ್ರಹಗಳು ವರ್ಷಿಸುವಾಗ ಅವನ ಮುಂದೆ ಬಾಗುತ್ತಾ ಇರಬೇಕಾದದ್ದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಾವು ಈ ಕರ್ತವ್ಯವನ್ನು ನಿರ್ವಹಿಸುವ ವರೆಗೂ ನಮ್ಮ ಹೆಜ್ಜೆ ಮುಂದಕ್ಕೆ ಹೋಗುತ್ತಾ ಇರುವುದು ಇನ್‌ಶಾ ಅಲ್ಲಾಹ್.

ಆದ್ದರಿಂದ, ಮೊದಲನೆಯದಾಗಿ, ಈ ಜಲ್ಸದ ಯಶಸ್ಸಿಗೆ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞತೆಗಳನ್ನು ಅರ್ಪಿಸಬೇಕು ಮತ್ತು ವ್ಯವಸ್ಥಾಪಕರ ದೌರ್ಬಲ್ಯಗಳಿಗಾಗಿ ನಾವು ಅವನಲ್ಲಿ ಕ್ಷಮೆ ಯಾಚಿಸಬೇಕು. ಅದೇ ರೀತಿ ಜಲ್ಸದಲ್ಲಿ ಭಾಗವಹಿಸಿದವರು ಜಲ್ಸಕ್ಕೆ ಸೇರುವ ಸೌಭಾಗ್ಯ ನೀಡಿದಕ್ಕೆ ಮತ್ತು ಜಲ್ಸದಲ್ಲಿ ಭಾಗವಹಿಸುವ ಮೂಲಕ ನಮ್ಮ ಆಧ್ಯಾತ್ಮಿಕ ಮತ್ತು ಶೈಕ್ಷಣಿಕ ದಾಹವನ್ನು ತಣಿಸಿಕೊಳ್ಳಲು ಅವಕಾಶವನ್ನು ನೀಡಿದಕ್ಕೆ ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞರಾಗಿರಬೇಕು. ಸಾಮಾನ್ಯವಾಗಿ, ಕೋವಿಡ್ ಸಾಂಕ್ರಮಿಕವು ಇನ್ನೂ ಸಂಪೂರ್ಣವಾಗಿ ಮುಗಿದಿಲ್ಲ ಎಂಬ ಭಯದ ಹೊರತಾಗಿಯೂ ಎಲ್ಲ ಕಾರ್ಯಗಳು ಸುಗಮವಾಗಿ ನಡೆಯಿತು. ಸಾಮಾನ್ಯವಾಗಿ, ಇಷ್ಟು ದೊಡ್ಡ ಜಲ್ಸದ ಹೊರತಾಗಿಯೂ, ಸರ್ವಶಕ್ತನಾದ ಅಲ್ಲಾಹನು ನಮ್ಮನ್ನು ಸುರಕ್ಷಿತವಾಗಿರಿಸಿದ್ದಾನೆ. ಅಲ್ಲಾಹನು ಎಲ್ಲರನ್ನೂ ತನ್ನ ರಕ್ಷಣೆಯಲ್ಲಿ ಇಡಲಿ. ಜಲ್ಸ ಮುಗಿದ ತಕ್ಷಣವೇ ಅಲ್ಲ ಬದಲಿಗೆ ಜಲ್ಸದ ಎರಡು ಅಥವಾ ಮೂರು ದಿನಗಳ ನಂತರ ಕೆಲವರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಅಲ್ಲಾಹನು ಅವರಿಗೆ ಆರೋಗ್ಯ ಮತ್ತು ಸುರಕ್ಷತೆಯನ್ನು ಅನುಗ್ರಹಿಸಲಿ. ನನ್ನ ಅರಿವಿಗೆ ಬಂದವರು ಬಹಳ ಕಡಿಮೆ ಇದ್ದಾರೆ ಮತ್ತು ಈಗ ಈ ಸಾಂಕ್ರಾಮಿಕ ರೋಗದಿಂದ ಅಸ್ವಸ್ಥರಾಗಿರುವವರು, ಇದು ಜಲ್ಸದ ಪರಿಣಾಮವಲ್ಲ ಎಂದು ನಾನು ಭಾವಿಸುತ್ತೇನೆ ಆದರೆ ಸಾಮಾನ್ಯವಾಗಿ ಕೆಲವು ಸ್ಥಳಗಳಲ್ಲಿ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ಸರ್ಕಾರದ ಘೋಷಣೆ ಇದೆ ಆದರೆ ಈಗ ಇದು ಇತರ ರೋಗಗಳು ಹೇಗೆ ಮೇಣ ಮತ್ತು ಕ್ಷೀಣಿಸುತ್ತವೆ ಎಂಬುದನ್ನು ಹೋಲುತ್ತದೆ. ಆದಾಗ್ಯೂ, ಅಲ್ಲಾಹನು ಪ್ರತಿಯೊಬ್ಬ ರೋಗಿಗೆ ಗುಣಪಡಿಸುವಿಕೆಯನ್ನು ನೀಡಲಿ.

ಈಗ ನಾನು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಎಲ್ಲ ಕಾರ್ಯಕರ್ತರು ಬಹಳ ಉತ್ತಮ ರೀತಿಯಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರು. ಮುಗುಳ್ನಗುತ್ತಾ ಅಸಾಮಾನ್ಯವಾದ ರೀತಿಯಲ್ಲಿ ತಮ್ಮ ಡ್ಯೂಟಿಗಳನ್ನು ನಿರ್ವಹಿಸಿದರು. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

ಈ ಬಾರಿ ಪ್ರತಿಯೊಂದು ಇಲಾಖೆಯ ಕಾರ್ಯಕರ್ತರು ತಮ್ಮ ವಿಭಾಗದ ಕೆಲಸಗಳನ್ನು ನಿರ್ವಹಿಸುವ ಕೌಶಲವು ಲಜ್ನಾದ ಕಡೆಯಿಂದಲೂ, ಪುರುಷರಿಂದಲೂ ವಿಶೇಷವಾಗಿ ಕಾಣುತ್ತಿತ್ತು. ಊಟದ ವ್ಯವಸ್ಥೆಯಲ್ಲಿ ಲಜ್ನದ ಕಡೆಯಿಂದ ಸಾಮಾನ್ಯವಾಗಿ ಉಂಟಾಗುವ ದೂರುಗಳು ಕೂಡ ಈ ಬಾರಿ ಇರಲಿಲ್ಲವೆಂದೇ ಹೇಳಬಹುದು. ಮತ್ತು ಈ ಬಾರಿ ಆಹಾರ ಮಾರ್ಕ್ಯೂ ಮತ್ತು ಇತರ ಅಗತ್ಯ ವ್ಯವಸ್ಥೆಗಳಿಗೆ ಲಜ್ನಾಗೆ ಒಂದು ಭಾಗದಲ್ಲಿ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿತ್ತು. ಸಾಮಾನ್ಯವಾಗಿ ಮಹಿಳೆಯರು ಇಷ್ಟಪಟ್ಟಿದ್ದಾರೆ. ಒಂದುವೇಳೆ ಅಲ್ಲಿಯೂ ಕೊರತೆಯಿದ್ದರೆ ಇನ್‌ಶಾಅಲ್ಲಾಹ್ ಮುಂದೆ ಅದನ್ನು ಹೋಗಲಾಡಿಸುವ ಪ್ರಯತ್ನ ಮಾಡಲಾಗುವುದು.

ಅದೇ ರೀತಿಯಲ್ಲಿ ಟ್ರಾಫಿಕ್, ಆಹಾರ ತಯಾರಿ, ರೊಟ್ಟಿ ಪ್ಲಾಂಟ್, ಸೆಕ್ಯೂರಿಟಿ, ಶುಚಿತ್ವ ಮುಂತಾದ ವಿಭಾಗಗಳು ಉತ್ತಮವಾಗಿ ಕಾರ್ಯ ನಿರ್ವಹಿಸಿದುವು. ಎಲ್ಲಕ್ಕಿಂತ ಮಿಗಿಲಾಗಿ ಎಂ.ಟಿ.ಎ. ವಿಭಾಗ ಈ ಬಾರಿ ಹೊಸ ಶೈಲಿಯಲ್ಲಿ ಪೂರ್ತಿ ಲೋಕವನ್ನು ಜಲ್ಸದೊಂದಿಗೆ ಜೋಡಿಸಿತು.

ಒಟ್ಟಿನಲ್ಲಿ ನಾನು ಹೆಸರೆತ್ತಿ ಉಲ್ಲೇಖಿಸಿದ ಮತ್ತು ಉಲ್ಲೇಖಿಸದ ಎಲ್ಲ ವಿಭಾಗಗಳಿಗೂ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಜಲ್ಸಕ್ಕೆ ಆಗಮಿಸಿದ ಅನ್ಯ ಅತಿಥಿಯರೆಲ್ಲರೂ ಸಹ ಎಲ್ಲಾ ಕಾರ್ಯಕರ್ತರ ಕಠಿಣ ಪರಿಶ್ರಮ ಮತ್ತು ಉತ್ತಮ ನಡತೆಯನ್ನು ಕಂಡು ಅಸಾಧಾರಣವಾಗಿ ಆಶ್ಚರ್ಯಪಟ್ಟರು. ಇದು ತಬ್ಲೀಗ್‌ಗೆ ಮರ್ಗವಾಗುವ ಮೌಖಿಕ ಮತ್ತು ಪ್ರಾಯೋಗಿಕ ಉದಾಹರಣೆಯಾಗಿದೆ ಇದನ್ನು ನಮ್ಮ ಕಾರ್ಯಕರ್ತರು ತೋರಿಸಿದರು. ಅಲ್ಲಾಹನು ಅವರೆಲ್ಲರಿಗೂ ಉತ್ತಮ ಪ್ರತಿಫಲವನ್ನು ನೀಡಲಿ.

ಜಲ್ಸಾ ಸಲಾನದವರಿಗೆ ನಾನು ಕೇವಲ ಒಂದು ವಿಷಯದ ಕಡೆ ಗಮನ ಹರಿಸಲು ಹೇಳುತ್ತೇನೆ ಅದೇನೆಂದರೆ ಜಲ್ಸಾ ಮುಗಿದ ತಕ್ಷಣ ನೀರು ಸ್ಥಗಿತಗೊಳಿಸಲಾಗುತ್ತದೆ ಮತ್ತು ಸ್ನಾನ ಗೃಹಗಳಲ್ಲಿ ನೀರು ಒದಗಿಸದಿದ್ದರೆ ಕನಿಷ್ಠ ಹನ್ನೆರಡು ಗಂಟೆಗಳ ಕಾಲ ನೀರು ಒದಗಿಸಬೇಕು. ಇದರ ಹೊರತಾಗಿ ಸಾಮಾನ್ಯವಾಗಿ ಎಲ್ಲಾ ವ್ಯವಸ್ಥೆಗಳು ಉತ್ತಮವಾಗಿದ್ದವು.

ಹೊರದೇಶಗಳಿಂದ ಭಾಗವಹಿಸಿದ ಭಾಗವಹಿಸಿದ ಮುಸ್ಲಿಮೇತರರ ಭಾವನೆಗಳೇನು? ಜಲ್ಸದ ವ್ಯವಸ್ಥೆಗಳನ್ನು ಹಾಗೂ ಜಲ್ಸವನ್ನು ವೀಕ್ಷಿಸುವುದರಿಂದ ಅವರು ಹೇಗೆ ಪ್ರಭಾವಿತರಾದರು ಎಂಬುದರ ಬಗ್ಗೆ ನಾನು ಅವರ ಕೆಲವು ಅಭಿಪ್ರಾಯಗಳನ್ನು ಪ್ರಸ್ತುತಪಡಿಸುತ್ತೇನೆ, ಅವೆಲ್ಲವನ್ನು ಇಲ್ಲಿ ಪ್ರಸ್ತುತಪಡಿಸಲು ಸಾಧ್ಯವಿಲ್ಲ.

ಪ್ರೊ. ಡಾ॥ ಜಯಾಲೂರುಘಾಂ ಅವರು ಬುರ್ಕಿನಾಫಾಸೋವಿನ ಪ್ರಸಿದ್ಧ ನೇತ್ರರೋಗ ಡಾಕ್ಟರ್ ಆಗಿದ್ದಾರೆ, ಮೆಡಿಕಲ್ ಯುನಿವರ್ಸಿಟಿನಲ್ಲಿ ಅವರು ಪ್ರೊಫೆಸರ್ ಆಗಿದ್ದಾರೆ ಮತ್ತು ಸೈನ್ಯದಲ್ಲಿ ಕರ್ನಲ್ ಆಗಿದ್ದಾರೆ, ನಮ್ಮ ನೇತ್ರ ಸಂಸ್ಥೆಗೂ ಆಗಾಗ ಬರುತ್ತಿರುತ್ತಾರೆ. ಅವರಿಗೆ ಜಲ್ಸದಲ್ಲಿ ಮೊದಲ ಬಾರಿಗೆ ಹಾಜರಾಗಲು ಸಾಧ್ಯವಾಯಿತು. ಅವರು ಃಏಳುತ್ತಾರೆ: ನಾನು ಮೊರಲ ಬಾರಿ ಜಲ್ಸದಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಪ್ರಭಾವಿತಗೊಳಿಸಿದ ಮೊದಲ ವಿಷಯವೇನೆಂದರೆ ಸಾವಿರಾರು ಜನರು ಒಂದೇ ಉದ್ದೇಶಕ್ಕಾಗಿ ಒಂದು ಸ್ಥಳದಲ್ಲಿ ಒಬ್ಬ ಧಾರ್ಮಿಕ ನಾಯಕನ ಸುತ್ತ ಒಟ್ಟಾಗಿರುವರು.

ಇಷ್ಟು ವ್ಯವಸ್ಥಾಪಿತ ಮತ್ತು ವಿಸ್ತಾರವಾದ ಏರ್ಪಾಡು ನನಗೆ ಆಶ್ಚರ್ಯಕರವಾಗಿದೆ. ನಾನು ಜನರಲ್ಲಿ ಬೆರೆತು ಇವರೆಲ್ಲರ ಒಗ್ಗಟ್ಟು ತೋರಿಕೆಯೇ ಅಥವಾ ಇದರಲ್ಲಿ ಸತ್ಯಾಂಶವಿದೆಯೋ ಎಂದು ತಿಳಿದುಕೊಳ್ಳಲು ಬಯಸಿದೆ, ಆದರೆ ನನಗೆ ಒಬ್ಬ ವ್ಯಕ್ತಿಯ ಮುಖದಲ್ಲಿಯೂ ನಾನು ಅಸಹ್ಯವನ್ನು ಕಾಣಲಿಲ್ಲ.

ವಿವಿಧ ಪ್ರದೇಶಗಳು, ರಾಷ್ಟ್ರಗಳು ಮತ್ತು ವಿವಿಧ ದೇಶಗಳಿಗೆ ಸೇರಿದ ವಿವಿಧ ಸಾಮಾಜಿಕ ವರ್ಗಗಳಿಗೆ ಸೇರಿದ ಜನರು ಸಾಮಾನ್ಯ ಉದ್ದೇಶಕ್ಕಾಗಿ ಒಂದೇ ಸ್ಥಳದಲ್ಲಿ ಸೇರುವುದು ಅಸಾಮಾನ್ಯ ಘಟನೆಯಾಗಿದೆ. ಹಾಗಾಗಿ, ಜಲ್ಸದಲ್ಲಿ ಭಾಗವಹಿಸುವ ಅಹ್ಮದಿಯರು ಕೂಡ ಈ ರೀತಿಯಲ್ಲಿ ಪ್ರಾಯೋಗಿಕ ತಬ್ಲೀಗ್ ಮಾಡುವವರಾಗಿರುತ್ತಾರೆ. ಮತ್ತೆ ಹೇಳುತ್ತಾರೆ ಭಾಷಣಗಳ ಗುಣಮಟ್ಟ ಬಹಳ ಉತ್ತಮವಾಗಿದ್ದುವು. ಈ ಭಾಷಣಗಳು ನಮ್ಮನ್ನು ಒಂದು ಉದ್ದೇಶ ಮತ್ತು ಗುರಿ ಒದಗಿಸಿಕೊಡಲು ಬಹಳ ಸಹಾಯಕರವಾಗಿದ್ದುವು. ಖಲೀಫತುಲ್ ಮಸೀಹ್‌ರ ಭಾಷಣಗಳನ್ನು ಸಹ ನಾನು ಆಲಿಸಿದೆ. ಪವಿತ್ರ ಖುರ್‌ಆನಿನ ವಚನಗಳ ಬೆಳಕಿನಲ್ಲಿ ಅಧ್ಯಾಪನೆಗಳನ್ನು ಅವರು ವಿವರಿಸಿದರು. ಈಗ ಅಲ್ಲಾಹನ ಸಂದೇಶವನ್ನು ಅರಿಯುವುದು ಮತ್ತು ಅದನ್ನು ತಿಳಿಸಿಕೊಡಲು ಒಬ್ಬ ವ್ಯಕಿಯ ಆವಶ್ಯಕತೆ ಎಷ್ಟಿದೆ ಎಂಬ ಅರಿವು ನನಗೆ ಉಂಟಾಗಿದೆ. ಆದ್ದರಿಂದ ಅಹ್ಮದಿಯಾ ಜಮಾಅತಿನಲ್ಲಿ ಇರುವ ಖಿಲಾಫತ್ ವ್ಯವಸ್ಥೆಯಿಂದ ಲೋಕ ಪಾಠ ಕಲಿಯಬಹುದಾಗಿದೆ.

ಅವರು ಹೇಳುತ್ತಾರೆ ನಾನು ನೋಡಿದ ಮತ್ತೊಂದು ಸಂಗತಿ, ಖಲೀಫರೊಂದಿಗೆ ಅಸಾಧಾರಣವಾದ ನಿಷ್ಠೆಯ ಸಂಬಂಧ.

ಎಲ್ಲರೂ ಒಟ್ಟಾಗಿ ಒಂದೇ ಅಸ್ತಿತ್ವದ ಹಾಗೆ ಇದೆ. ತಮ್ಮ ಇಮಾಮರ ಮೇಲೆ ಹೆಚ್ಚು ಭರವಸೆಯನ್ನು ಹೊಂದಿರುವರು. ಅವರು ನಮ್ಮನ್ನು ಸರಿಯಾದ ಮಾರ್ಗದಲ್ಲಿ ನಡೆಸುವರು ಎಂಬ ಭರವಸೆ ಅವರಿಗಿದೆ. ಅವರು ಹೇಳುತ್ತಾರೆ: ಅಲ್ಲಾಹನು ನನಗೆ ಸೌಭಾಗ್ಯ ನೀಡಿದರೆ, ಇನ್ನು ಮುಂದೆ ಪ್ರತಿ ವರ್ಷ ಜಲ್ಸದಲ್ಲಿ ಭಾಗವಹಿಸುವೆನು. ಏಕೆಂದರೆ ಇಲ್ಲಿ ಮೂರೂ ದಿನಗಳು ಅಲ್ಲಾಹನೊಂದಿಗೆ ಸಂಬಂಧ ಮತ್ತು ಮನುಷ್ಯತ್ವದ ಕುರಿತು ಮಾತುಗಳು ನಡೆಯುತ್ತವೆ. ಇದನ್ನು ನಾನು ಕೂಡ ಕಲಿಯುವುದು ಅಗತ್ಯ.

ಅಮೇರಿಕದ ಪ್ರಸಿದ್ಧ ಓರ್ವ ಕಾನೂನು ತಜ್ಞ ಮತ್ತು ಪ್ರೊಫೆಸರ್ ಡಾ॥ ಬ್ರೆಟ್ ಶಾರ್ಫ್ಸ್ ಅವರು ಸಹ ಜಲ್ಸದಲ್ಲಿ ಭಾಗವಹಿಸಿದ್ದರು ಅವರು ಹೇಳಿದರು: ಇಲ್ಲಿ ಇಷ್ಟು ದೊಡ್ಡ ಜನಸಂದಣಿಯನ್ನು ನೋಡಿ ನನಗೆ ತುಂಬಾ ಖುಷಿಯಾಗಿದೆ. ಮತ್ತು ಜನರ ನಡುವಿನ ಸಹಕಾರದ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ ಅವರು, ನಾನು ಪ್ರಪಂಚದಾದ್ಯಂತ ಅಂತಹ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇನೆ, ಅಲ್ಲಿ ನೋಂದಣಿ ಪ್ರಕ್ರಿಯೆಯೂ ಮಾಡಲಾಗುತ್ತದೆ, ಆದರೆ ಜಲ್ಸ ಸಾಲಾನದಲ್ಲಿ ಎಷ್ಟು ವ್ಯವಸ್ಥಾಪಿತವಾಗಿ ರಿಜಿಸ್ಟ್ರೇಶನಿನ ಹಂತಗಳನ್ನು ಈಡೇರಿಸಲಾಗುತ್ತಿತ್ತೋ ಅದು ಆಶ್ಚರ್ಯಕರವಾದ ದೃಶ್ಯವಾಗಿತ್ತು. ನಾನು ಆಫೀಸಿನಲ್ಲಿ ಕುಳಿತುಕೊಂಡು ಕೆಲವು ನಿಮಿಷಗಳು ಆಗುವುದರೊಳಗೆ ಎಲ್ಲವನ್ನು ತಯಾರು ಮಾಡಿ

ನನಗೆ ಕೊಡಲಾಯಿತು. ಬರುವ ಅತಿಥಿಗಳ ರಿಜಿಸ್ಟ್ರೇಶನ್ ಮತ್ತು ಆವಶ್ಯಕ ಕೆಲಸಗಳು ಮೊದಲೇ ಮಾಡಲಾಗುತ್ತವೆ ಎಂದು ನನ್ನೊಡನೆ ಹೇಳಲಾಯಿತು. ನೋಂದಣಿ ಸಿಬ್ಬಂದಿ ಕೂಡ ಉತ್ತಮ ಕೆಲಸ ಮಾಡಿದ್ದಾರೆ ಮಾಶಾಅಲ್ಲಾಹ್. ಆತಿಥ್ಯ ತುಂಬಾ ಚೆನ್ನಾಗಿತ್ತು ಎನ್ನುತ್ತಾರೆ. ಇಷ್ಟು ಟ್ರಾಫಿಕ್ ನಡುವೆಯೂ ಸ್ವಯಂಸೇವಕರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದ ರೀತಿ ಮರೆಯಲಾಗದ ಅನುಭವವಾಗಿದೆ. ಹೀಗೆ, ಅವರು ಸಂಪರ್ಕಕ್ಕೆ ಬಂದ ಪ್ರತಿಯೊಬ್ಬ ಕಾರ್ಯಕರ್ತರನ್ನು ಹೊಗಳಿದ್ದಾರೆ.

ಬೆಲೀಜ್ ನಗರದ ಮೇಯರ್ ಬಂದಿದ್ದರು. ಅವರು ಹೇಳುತ್ತಾರೆ ನಾನು ನನ್ನ ಜೀವಿತದಲ್ಲಿ ಇಷ್ಟು ಶಾಂತಿಯುತ ಜನರನ್ನು ಕಂಡಿಲ್ಲ. ಕೆಲವರು ಇಸ್ಲಾಂ ಅನ್ನು ಭಯೋತ್ಪಾದನೆಯೊಂದಿಗೆ ಸಮೀಕರಿಸುತ್ತಾರೆ ಎಂದು ನನಗೆ ನಂಬಲು ಸಾಧ್ಯವಿಲ್ಲ. ಇಲ್ಲಿ ನಾನು ನೋಡಿದ ಆಧ್ಯಾತ್ಮಿಕ ಮತ್ತು ಸಹೋದರತೆಯ ವಾತಾವರಣ ನನಗೆ ಆಶ್ಚರ್ಯಕರವಾಗಿದೆ. ನಾನು ಇಲ್ಲಿ ನೋಡಿದ ಆಧ್ಯಾತ್ಮಿಕ ವಾತಾವರಣ, ಜನರ ಪರಸ್ಪರ ಪ್ರೀತಿ, ಉತ್ತಮ ವರ್ತನೆ ಖಂಡಿತವಾಗಿಯೂ ಶ್ಲಾಘನೀಯ. ಮುಂದಿನ ಬಾರಿ ಪುನಃ ಜಲ್ಸಗೆ ಬರಲು ನಾನು ಬಯಸುತ್ತೇನೆ. ಆದರೆ ಮೇಯರ್ ಎಂಬ ನೆಲೆಯಲ್ಲಿ ಅಲ್ಲ, ಬದಲಾಗಿ ಒಬ್ಬ ವಲಂಟಿಯರ್ ಎಂಬ ನೆಲೆಯಲ್ಲಿ. ವಲಂಟಿಯರ್‌ಗಳು ನನಗೆ ಬಹಳ ಸ್ಫೂರ್ತಿ ನೀಡಿದ್ದಾರೆ. ಇಂತಹ ವೈಭವಶಾಲಿ ಜಲ್ಸದ ವ್ಯವಸ್ಥೆಯ ಭಾಗವಾಗಲು ನಾನು ಬಯಸುತ್ತೇನೆ. ಇಷ್ಟು ಮಹೋನ್ನತವಾದ ಜಲ್ಸ ನಾನು ಎಂದಿಗೂ ಕಂಡಿಲ್ಲ. ಈ ಲೋಕದ ಭವಿಷ್ಯ ಅಹ್ಮದಿಯ್ಯತ್ ಆಗಿದೆ.

ಹೀಗೆ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರಸ್ತುತಪಡಿಸುವ ನಿಜವಾದ ಇಸ್ಲಾಂ ಬೋಧನೆಗಳಾಗಿವೆ ಇದರಿಂದ ಜನರು ಪ್ರಭಾವಿತರಾಗುತ್ತಾರೆ.

ಘಾನಾದ ಸ್ನೇಹಿತ ಮೈಕೆಲ್ ವಿಲ್ಸನ್. ಒಂದು ಸಂಸ್ಥೆಯು ಪರಿಸರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಅಡಿಯಲ್ಲಿ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನೆಯ ಕೌನ್ಸಿಲ್ ಆಗಿದೆ, ಅದರ ಮುಖ್ಯ ತಂತ್ರಜ್ಞರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ವಿವಿಧ ದೇಶಗಳಲ್ಲಿ ಸಮ್ಮೇಳನಗಳಲ್ಲಿ ಭಾಗವಹಿಸಲು ಅವಕಾಶವನ್ನು ಪಡೆದುದ್ದಾರೆ. ಅವರು ಜಲ್ಸದಲ್ಲಿ ಭಾಗವಹಿಸಿದರು. ಜಲ್ಸದ ಮೊದಲು ನಡೆದ ಚರ್ಚೆಯಲ್ಲಿ, ಅವರು ವ್ಯವಸ್ಥೆಗಳನ್ನು ನೋಡಿದರು ಮತ್ತು ನಾನು ನೋಡುತ್ತಿರುವುದನ್ನು, ನಾನು ಇಲ್ಲಿಯವರೆಗೆ ನೋಡಿದ್ದು ಸರ್ವಶಕ್ತನಾದ ಅಲ್ಲಾಹನ ಅನುಗ್ರಹವಿಲ್ಲದೆ ಇದು ಎಂದಿಗೂ ಸಾಧ್ಯವಿಲ್ಲ ಎಂದು ಹೇಳಿದರು. ಶುಕ್ರವಾರ ಜಲ್ಸ ನಡೆಯುವ ಸ್ಥಳಕ್ಕೆ ಆಗಮಿಸಿದ ಅವರು, ಇಲ್ಲಿನ ಎಲ್ಲ ಸ್ವಯಂಸೇವಕರ ಬದ್ಧತೆ ಅಚ್ಚರಿ ಮೂಡಿಸಿದೆ ಎಂದು ಪದೇ ಪದೇ ಹೇಳುತ್ತಿದ್ದರು. ನಿಜಕ್ಕೂ ಇದೊಂದು ದೈವಿಕ ಜಮಾಅತ್ ಆಗಿದ್ದು ಅಲ್ಲಾಹನ ಕೃಪೆಯಿಲ್ಲದೆ ಈ ಎಲ್ಲಾ ಕೆಲಸಗಳು ಸಾಧ್ಯವಿಲ್ಲ.

ಇಲ್ಲಿ ಬಹಳ ಡಿಸಿಪ್ಲಿನ್ ಮತ್ತು ಪ್ರೀತಿಯ ವಾತಾವರಣವಿದೆ. ಎಲ್ಲ ಸ್ವಯಂ ಸೇವಕರು ವಿದ್ಯಾವಂತರು. ಅವರಲ್ಲಿ ಕೆಲವರು ಕನ್ಸಲ್‌ಟಂಟ್ ಆಗಿರುವರು. ಆದರೆ ಅವರು ಜಲ್ಸದಲ್ಲಿ ಕಾರ್ಪಂಟರಿ ಮತ್ತು ಶುಚಿಯ ಕೆಲಸಗಳನ್ನು ಮಾಡುತ್ತಿದ್ದರು. ಈ ಸ್ವಯಂಸೇವಕರ ಹೃದಯಗಳಲ್ಲಿ ಅಲ್ಲಾಹನ ಭಯ ಇಲ್ಲದಿರುತ್ತಿದ್ದರೆ ಎಂದಿಗೂ ಇಷ್ಟು ಗುಣಮಟ್ಟದ ಕೆಲಸವನ್ನು ಮಾಡಲಾರರು. ಇಂತಹ ಮೌನ ತಬ್ಲೀಗ್ ಮಾಡುವ ಸೇವಕರು ಸೌಭಾಗ್ಯಶಾಲಿಗಳು.

ಅವರು ಜಾಗತಿಕ ಬೈಅತ್ತಿನಿಂದ ಪ್ರಭಾವಿತಗೊಂಡು ಮತ್ತೂ ಹೇಳುತ್ತಾರೆ: ಅಹ್ಮದಿಯ್ಯತ್ ಏನೆಂದು ಜಲ್ಸಗೆ ಮುಂಚೆ ನನಗೆ ಗೊತ್ತಿರಲಿಲ್ಲ. ಆದರೆ ಈಗ ಅರಿತಿರುವೆನು. ಇನ್ನು ಮುಂದೆ ನಾನು ಪ್ರತಿ ವರ್ಷ ಜಲ್ಸಗೆ ಬರುವೆನು. ತದನಂತರ ಅವರು ಹೇಳಿದರು ಘಾನಾದಲ್ಲಿ ಜಮಾಅತ್ ಅನ್ನು ಹೆಚ್ಚು ಪರಿಚಯಿಸಲು ಘಾನಾ ಜಮಾಅತ್ ಗಮನಹರಿಸಬೇಕು, ಅಲ್ಲಿ ಇನ್ನು ಈ ಬಗ್ಗೆ ಕೊರತೆ ಇದೆ.

ನಂತರ ಹೈಟಿಯ ಧಾರ್ಮಿಕ ವ್ಯವಹಾರಗಳ ಸಚಿವಾಲಯದ ಪ್ರತಿನಿಧಿಯಾಗಿದ್ದ ಹೈಟಿಯ ಶ್ರೀ ಜೋಯಲ್ ಟ್ಯುರೆನ್ನೆ ಯುಕೆಯಲ್ಲಿ ಜಲ್ಸ ಸಾಲಾನದಲ್ಲಿ ಸೇರಿದರು. ಅವರು ಹೇಳುತ್ತಾರೆ: ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿದ್ದೇನೆ. ಈ ಅನುಭವ ನನಗೆ ತುಂಬಾ ಸ್ಫೂರ್ತಿದಾಯಕ ಮತ್ತು ಸಂತೋಷದಾಯಕವಾಗಿತ್ತು. ವ್ಯವಸ್ಥೆಗಳು ತುಂಬಾ ಚೆನ್ನಾಗಿವೆ. ನಲವತ್ತು ಸಾವಿರಕ್ಕೂ ಹೆಚ್ಚು ಜನರ ಸೇರಿರುವ ಸಭೆಯಲ್ಲಿ ಯಾವುದೇ ರೀತಿಯ ಕೊರತೆಗಳು ಕಾಣಿಸಲಿಲ್ಲ. ಪ್ರತಿಯೊಬ್ಬರು ಮುಗುಳ್ನಗುವ ಮುಖದೊಂದಿಗೆ ಪರಸ್ಪರ ಭೇಟಿಯಾಗುತ್ತಿದ್ದರು. ನನ್ನಿಂದ ಇತರರಿಗೆ ತೊಂದರೆ ಉಂಟಾಗಬಾರದೆಂಬ ಪ್ರಯತ್ನದಲ್ಲಿ ಎಲ್ಲರೂ ಇದ್ದರು. ಪ್ರತಿಯೊಬ್ಬರು ಇತರರಿಗೆ ಆರಾಮ ತಲುಪಿಸಲು ಕಾಳಜಿವಹಿಸುತ್ತಿದ್ದರು. ಈ ಸಂಗತಿ ನಾನು ಬೇರೆ ಯಾವುದೇ ಧರ್ಮದಲ್ಲಿ, ಸಭೆಗಳಲ್ಲಿ ನೋಡಿಲ್ಲ. ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಜಲ್ಸಗಳ ಮೂಲ ಉದ್ದೇಶಗಳಲ್ಲಿ ಇದು ಒಂದಾಗಿದೆ. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಇನ್, ಸಂಪುಟ 6, ಪುಟ 395)

ಅವರು ಹೇಳುತ್ತಾರೆ: ಬೇರೆ ಬೇರೆ ಸಂಸ್ಕೃತಿ, ಬಣ್ಣ, ಜನಾಂಗ ಇದ್ದರೂ ಎಲ್ಲರೂ ಒಂದೇ ಕುಟುಂಬದವರಂತೆ ಪರಸ್ಪರ ಬೆರೆಯುತ್ತಿದ್ದರು.

ಈ ಆಹಾರವೇ ಎಲ್ಲರಿಗೂ ಪ್ರಿಯವಾದ ಆಹಾರ ಎಂಬಂತೆ ವಿವಿಧ ಖೌಮಿನ ಜನರು ಪ್ರತಿದಿನ ಒಂದೇ ರೀತಿಯ ಆಹಾರವನ್ನು ಸೇವಿಸುತ್ತಿದ್ದರು. ಅವರು ಹೇಳುತ್ತಾರೆ (ಅವರಿಗೆ ಕುತೂಹಲವಿತ್ತು) ಆಫ್ರಿಕದಿಂದ ಆಗಮಿಸಿದ್ದ ಒಬ್ಬ ಅತಿಥಿಯೊಡನೆ ನಾನು ಕೇಳಿದೆ: ಯಾರಿಗೂ ಯಾವುದೇ ಸಂಗತಿಯ ಬಗ್ಗೆ ಆಕ್ಷೇಪಣೆ ಇರದೇ ಇರಲು ಕಾರಣವೇನು? ಅವರು ಹೇಳಿದರು: ನಾವು ಇಲ್ಲಿ ಅಲ್ಲಾಹನ ಸಂಪ್ರೀತಿಗಾಗಿ ಮತ್ತು ಖಲೀಫತುಲ್ ಮಸೀಹ್‌ರನ್ನು ನೋಡಲು, ಅವರ ಮಾತುಗಳನ್ನು ಆಲಿಸಲು ಮತ್ತು ಅವರನ್ನು ಭೇಟಿಯಾಗಲು ಬಂದಿದ್ದೇವೆ. ಆದ್ದರಿಂದ ಇತರ ಲೌಕಿಕ ಸಂಗತಿಗಳ ಬಗ್ಗೆ ನಾವು ಗಮನಿಸುವುದಿಲ್ಲ. ಈ ವಿಷಯ ನನ್ನನ್ನು ತುಂಬಾ ಪ್ರಭಾವಿಸಿದೆ. ಇಷ್ಟು ವಿರೋಧದ ನಡುವೆಯೂ ಜಮಾಅತ್ ವಿಶ್ವದಲ್ಲಿ ಶಾಂತಿಯನ್ನು ಪಸರಿಸಲು ಪ್ರಯತ್ನಿಸುತ್ತಿದೆ ಎಂದು ಅವರು ಜಮಾಅತ್ ಅನ್ನು ಶ್ಲಾಘಿಸಿದ್ದಾರೆ. ಮತ್ತೆ ಹೇಳುತ್ತಾರೆ ಅಹ್ಮದೀಯರ ನಡುವೆ ಯಾವುದೇ ಭೇದಭಾವವಿಲ್ಲ. ಎಲ್ಲರೂ ಸಮಾನರು, ನಾನು ಇದನ್ನು ಮೊದಲ ಬಾರಿಗೆ ನೋಡಿದೆ. ಎಲ್ಲಾ ವಯೋಮಾನದ ಜನರು ವಿವಿಧ ಸೇವೆಗಳಿಗೆ ಸ್ವಯಂಸೇವಕರಾಗಿದ್ದರು. ಟ್ರಾಫಿಕ್ ಕಂಟ್ರೋಲ್ ಇದೆ. ಪಾರ್ಕಿಂಗ್ ಇದೆ. ಊಟೋಪಚಾರವಿದೆ. ನೀರು ಪೂರೈಕೆ ಇದೆ. ಶಿಸ್ತು ಇದೆ. ಅವರ ಸೇವೆಗೆ ಎಲ್ಲರೂ ಮುಡಿಪಾಗಿಟ್ಟಿದ್ದರು. ನಾನು ಅಹ್ಮದಿಯರಲ್ಲಿ ಅನೇಕ ಗುಣಗಳನ್ನು ಕಂಡೆನು. ಅವುಗಳನ್ನು ನಾನು ಬೇರೆಲ್ಲೂ ಕಂಡಿಲ್ಲ.

ನಾನು ಬಹಳಷ್ಟು ಧಾರ್ಮಿಕ ಪಂಡಿತರ ಭಾಷಣಗಳನ್ನು ಆಲಿಸಿದ್ದೇನೆ. ಆದರೆ ಎಲ್ಲರೂ ತಮ್ಮ ಬಗ್ಗೆಯೇ ಹೇಳುತ್ತಿರುತ್ತಾರೆ. ಆದರೆ ಖಲೀಫತುಲ್ ಮಸೀಹ್‌ರು ಅಲ್ಲಾಹನ, ಹಝ್ರತ್ ಪೈಗಂಬರ್(ಸ) ಅವರ ಮತ್ತು ಮಸೀಹ್ ಮೌಊದ್(ಅ)ರ ಮಾತುಗಳನ್ನು ಓದಿ ಹೇಳುತ್ತಿದ್ದರು.

ಅವರು ಹೇಳುತ್ತಾರೆ: ಇದು ನನಗೆ ಬಹಳ ಆಶ್ಚರ್ಯಕರವಾಗಿತ್ತು. ಮೂರು ದಿನಗಳ ಕಾಲ ಅವರು ಜಲ್ಸಗಾಹ್‌ದಲ್ಲಿ ಕುಳಿತು ಭಾಷಣಗಳನ್ನು ಆಲಿಸಿದರು, ಆದರೆ ಅನೇಕ ಅಹ್ಮದೀಯರಿಗಿಂತ ಹೆಚ್ಚು ಗಮನವಿಟ್ಟು ಆಲಿಸಿದರು ಮತ್ತು ವಿವಿಧ ಭಾಷಣಗಳನ್ನು ಟಿಪ್ಪಣಿ ಮಾಡಿಕೊಂಡರು. ಅವರು ತಮ್ಮ ಡೈರಿಯನ್ನು ಬರೆಯುತ್ತಿದ್ದರು, ಅದರಲ್ಲಿ ಸಂಪೂರ್ಣ ಟಿಪ್ಪಣಿಗಳನ್ನು ತೆಗೆದುಕೊಳ್ಳುತ್ತಿದ್ದರು ಮತ್ತು ಅವರಿಗೆ ಏನಾದರು ಅರ್ಥವಾಗದಿದ್ದಲ್ಲಿ, ಅವರು ತಮ್ಮ ಪಕ್ಕದಲ್ಲಿದ್ದ ವ್ಯಕ್ತಿಯನ್ನು ಅದರ ಅರ್ಥವನ್ನು ಕೇಳುತ್ತಿದ್ದರು. ನಿಸ್ಸಂದೇಹವಾಗಿಯೂ ನಾನು ಅಹ್ಮದಿಯಲ್ಲ, ಆದರೆ ಈಗ ಅಹ್ಮದಿಯಾ ಜಮಾಅತಿನ ಪರವಾಗಿ ಮಾತನಾಡುತ್ತೇನೆ. ಎಲ್ಲೆಲ್ಲ ಮುಸ್ಲಿಮರ ಪ್ರಸ್ತಾಪ ಆಗುತ್ತದೋ ಅಲ್ಲೆಲ್ಲ ಯಥಾರ್ಥ ಮುಸ್ಲಿಮರು ಅಹ್ಮದಿಯರು ಆಗಿರುವರು ಎಂದು ಹೇಳುತ್ತೇನೆ.

ಇಂಡೋನೇಶಿಯದ ಧಾರ್ಮಿಕ ಕಾರ್ಯಗಳ ಮಾಜಿ ಮಂತ್ರಿಯಾದ ಲುಖ್ಮಾನ್ ಹಕೀಮ್ ಸೈಫುದ್ದೀನ್ ಸಾಹಿಬ್ ಅವರು ಹೇಳುತ್ತಾರೆ: ಜಲ್ಸದಲ್ಲಿ ಭಾಗವಹಿಸಲು ನಾನು ತುಂಬಾ ಹೆಮ್ಮೆಪಡುತ್ತೇನೆ ಮತ್ತು ಲಂಡನ್ ಏರ್‌ಪೋರ್ಟ್‌ನಿಂದ "ಎಲ್ಲರೊಂದಿಗೆ ಪ್ರೀತಿ, ಯಾರೊಡನೆ ದ್ವೇಷವಿಲ್ಲ" ಎಂಬ ನಿಮ್ಮ ಆದರ್ಶ ಸೂತ್ರವನ್ನು ನಾನು ಏರ್‌ಪೋರ್ಟಿನಿಂದ ಜಲ್ಸದ ವರೆಗೂ ಕಾಣುತ್ತಾ ಇದ್ದೆನೆ. ಎಲ್ಲೆಡೆ ಹೆಚ್ಚಿನ ಆತಿಥ್ಯವನ್ನು ತೋರಿಸಲಾಯಿತು. ಸಹೋದರತ್ವದ ಅತ್ಯಂತ ಬಲವಾದ ಬಂಧವನ್ನು ಕಂಡಿತು. ಒಬ್ಬರನ್ನೊಬ್ಬರು ಭೇಟಿಯಾಗಿ, ಮುಗುಳ್ನಗೆ ಬೀರುತ್ತಾ, ಅಭಿನಂದಿಸಿ, ಪ್ರಾರ್ಥನೆಗಳನ್ನು ಹಂಚಿಕೊಳ್ಳುವ ದೃಶ್ಯವನ್ನು ನೋಡುತ್ತಲೇ ಇದ್ದೆ.

ಗ್ಯಾಂಬಿಯಾದಿಂದ ಜಲ್ಸ ಸಾಲಾನಕ್ಕೆ ಬಂದು ಸೇರಿದ ಮಾಹಿತಿ ಸಚಿವ ಲ್ಯಾಮೈನ್ ಎಸ್‌ಐ ಜಾಮೆ ಸಾಹಿಬ್ ಅವರು ಹೇಳೂತ್ತಾರೆ: 2023 ರ ಜಲ್ಸ ಸಾಲಾನದ ಎಲ್ಲಾ ವ್ಯವಸ್ಥೆಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೆನೆ. ನಿಸ್ವಾರ್ಥವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದ ಮತ್ತು ಶಿಸ್ತನ್ನು ಕಾಪಾಡಿದ ಸ್ವಯಂಸೇವಕರು ಇನ್ನೂ ಆಶ್ಚರ್ಯಕರವಾಗಿತ್ತು. ಇಷ್ಟು ದೊಡ್ಡ ಜಲಕೂಟದಲ್ಲಿ ಯಾವುದೇ ರೀತಿಯ ಹೊಡೆದಾಟ, ಬಡೆದಾತ ನಡೆದ ಒಂದೇ ಒಂದು ಘಟನೆ ನಡೆದಿಲ್ಲ ಮತ್ತು ಎಲ್ಲಾ ವ್ಯವಸ್ಥೆಗಳನ್ನು ಉತ್ತಮವಾಗಿ ಮಾಡಲಾಗಿದೆ. ನಾನು ಗಮನಿಸಿದ ಇನ್ನೊಂದು ವಿಷಯವೆಂದರೆ ಜಮಾಅತ್ ಸದಸ್ಯರು ತಮ್ಮ ಇಮಾಮ್ ಜೊತೆಗಿನ ಪ್ರೀತಿಯ ಸಂಬಂಧವನ್ನು ಬೇರೆಲ್ಲಿಯೂ ಕಾಣುವುದಿಲ್ಲ. ಜಾತಿ–ಬಣ್ಣದ ಬೇಧವಿಲ್ಲದೆ ಎಲ್ಲರೂ ನಗುವ ಮುಖದಿಂದ ಭೇಟಿಯಾಗುವ ಅಹ್ಮದಿಯಾ

ಜಮಾಅತ್ ನಲ್ಲಿ ಇಂದು ಭೂಮಿಯ ಮೇಲಿನ ನಿಜವಾದ ಭ್ರಾತೃತ್ವದ ಜೀವಂತ ಚಿತ್ರಣವಿದೆ ಎಂದು ಒಪ್ಪಿಕೊಳ್ಳದೆ ನಾನು ಉಳಿಯಲು ಸಾಧ್ಯವಿಲ್ಲ. ನಂತರ ಅವರು ಗ್ಯಾಂಬಿಯಾದ ಅಹ್ಮದಿಯಾ ಜಮಾತ್‌ನ ಸೇವೆಗಳ ಬಗ್ಗೆ ಬರೆದರು, ಅದನ್ನು ನಾವು ಬಹಳ ಗೌರವದಿಂದ ನೋಡುತ್ತೇವೆ.

ನಂತರ ಗ್ಯಾಂಬಿಯಾದಿಂದ ಎಬ್ರಿಮಾ ಜಿ.ಸಂಕರ್ರೆ ಅವರು ಸರ್ಕಾರದ ವಕ್ತಾರರಾಗಿದ್ದಾರೆ. ಡಯಾಸ್ಪೊರಾ ಅಧ್ಯಕ್ಷರ ಸಲಹೆಗಾರರಾಗಿದ್ದಾರೆ. ಜಲ್ಸದ ಸಂಪೂರ್ಣ ಏರ್ಪಾಡುಗಳು ಯಶಸ್ಸಿನ ಕಥೆಯಾಗಿದೆ. ಎಲ್ಲ ಭಾಗವಹಿಸುವರಲ್ಲಿ ಶಿಸ್ತು, ಪರಸ್ಪರ ಸಹೋದರತೆ ಮತ್ತು ಪ್ರೀತಿಯ ಮನೋಭಾವ ಎದ್ದು ಕಾಣುತ್ತಿತ್ತು. ಎಲ್ಲಾ ಭಾಷಣಗಳು ಮತ್ತು ಪ್ರವಚನಗಳು ಜ್ಞಾನದಿಂದ ತುಂಬಿದ್ದವು. ಪರಸ್ಪರ ಪ್ರೀತಿ ಮತ್ತು ಶಾಂತಿಯುತ ಸಮಾಜವನ್ನು ಸ್ಥಾಪಿಸಲು ಭಾಷಣಗಾರರು ಒತ್ತಾಯಿಸಿದರು. ತದನಂತರ ಅವರು ಹೇಳುತ್ತಾರೆ: ಖಲೀಫ ಎ ವಕ್ತ್ (ಕಾಲಘಟ್ಟ ಖಲೀಫರು) ಅವರು ತಮ್ಮ ಉದ್ಘಾಟನಾ ಮತ್ತು ಸಮಾರೋಪ ಭಾಷಣದಲ್ಲಿ ಸಮಾಜದ ಕೆಳ ಮತ್ತು ಬಡವರನ್ನು ದಯೆಯಿಂದ ನಡೆಸಿಕೊಳ್ಳುವಂತೆ ನೀಡಿದ ಸೂಚನೆಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಮತ್ತೆ ಹೇಳುತ್ತಾರೆ: ಇಂದಿನ ಕಷ್ಟಗಳ ನಡುವೆಯೂ ಪ್ರಪಂಚದ ಭವಿಷ್ಯವು ಉಜ್ವಲವಾಗಿದೆ ಎಂದು ನಾನು ವೈಯಕ್ತಿಕವಾಗಿ, ಸಮಾಜದ ವಿವಿಧ ವರ್ಗಗಳ ಹಿರಿಯ ಮತ್ತು ಯುವಕರನ್ನು ಭೇಟಿ ಮಾಡುವ ಮೂಲಕ (ನಾನು ವೈಯಕ್ತಿಕವಾಗಿ ಜನರನ್ನು ಭೇಟಿಯಾಗಿದ್ದೇನೆ) ಭರವಸೆಯನ್ನು ನವೀಕರಿಸಿದ್ದೇನೆ ಎಂದು ಹೇಳುತ್ತಾರೆ. ಏಕೆಂದರೆ ಜಗತ್ತನ್ನು ಎಲ್ಲಾ ಮಾನವಕುಲಕ್ಕೆ ಶಾಂತಿಯುತ ಸ್ಥಳವನ್ನಾಗಿ ಮಾಡಲು ಪ್ರಯತ್ನಿಸುತ್ತಿರುವ ಜನರು ಇದ್ದಾರೆ. ವಿವಿಧ ದೇಶಗಳ ನಲವತ್ತು ಸಾವಿರಕ್ಕೂ ಹೆಚ್ಚು ಅತಿಥಿಗಳನ್ನು ಜಮಾಅತ್ ಹೇಗೆ ಆಯೋಜಿಸುತ್ತಿದೆ ಎಂಬುದನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅಂತಿಮವಾಗಿ, ಯುವಕರ ಉತ್ಸಾಹ ಮತ್ತು ಸ್ವಯಂಸೇವಕ ಮನೋಭಾವವು ಅತ್ಯಂತ ಪ್ರಭಾವಶಾಲಿಯಾಗಿತ್ತು.

ಅವರ ಶಿಸ್ತು, ಅಧಿಕಾರದ ಗೌರವ ಮತ್ತು ನಿಸ್ವಾರ್ಥ ಸೇವೆಯು ನನ್ನ ಮನಸ್ಸಿನಲ್ಲಿ ಅಳಿಸಲಾಗದ ಪ್ರಭಾವ ಬೀರಿದೆ ಮತ್ತು ಪ್ರಪಂಚದ ಭವಿಷ್ಯವು ಉಜ್ವಲವಾಗಿದೆ ಏಕೆಂದರೆ ಅಂತಹ ಯುವಕರು ಜಗತ್ತನ್ನು ಉತ್ತಮ ಸ್ಥಳವಾಗಿಸಲು ಶ್ರಮಿಸುತ್ತಿದ್ದಾರೆ. ಹೀಗೆ, ನಮ್ಮ ಯುವಕರ ಪ್ರಭಾವವು ಅನ್ಯರ ಮೇಲೆ ಬಿರುತ್ತದೆ ಇದು ಸಹ ಮೌಖಿಕ ತಬ್ಲೀಗ್ ಆಗಿದೆ.

ಲೂಯಿಸ್ ಕಾರ್ಲೋಸ್ ಡಾ ಸಿಲ್ವಾ ಬ್ರೆಜಿಲ್‌ನ ಪೆಟ್ರೋಪೊಲಿಸ್‌ನಿಂದ ಪತ್ರಿಕೆ ವರದಿಗಾರರಾಗಿದ್ದರು. ಅವರು ಹೇಳುತ್ತಾರೆ: 118 ದೇಶಗಳಿಂದ ಬಂದ ಜನರು ಸಾಹೋದರ್ಯದಿಂದ ಒಟ್ಟಾಗಿ ಇರುವುದು ಬೇರೆಯವರಿಗೆ ಸಾಧ್ಯವಾಗುವ ಸಂಗತಿಯಲ್ಲ. ಎಲ್ಲ ಜನರು ಈ ರೀತಿಯಾಗಿ ಪರಸ್ಪರ ಉತ್ತಮ ಸ್ವಭಾವ, ಸಹಾನುಭೂತಿ, ಸಂತೋಷ ಮತ್ತು ಗೌರವದಿಂದ ಭೇಟಿಯಾಗುವುದು ನನಗೆ ಚೆನ್ನಾಗಿ ತೋರುತ್ತಿತ್ತು. ನಂತರ ಜಲ್ಸದ ಎಲ್ಲಾ ಕಾರ್ಯಕ್ರಮಗಳನ್ನು ಮತ್ತು ವ್ಯವಸ್ಥೆಗಳನ್ನು ಶ್ಲಾಘಿಸಿದರು. ಅತಿಥಿಗಳಿಗಾಗಿ ಟ್ರಾನ್ಸ್‌ಪೋರ್ಟಿನ ಉತ್ತಮ ವ್ಯವಸ್ಥೆ ಇತ್ತು, ಇದು ಅಸಾಮಾನ್ಯ ಎಂದು ಅವರು ಹೇಳುತ್ತಾರೆ. ಮತ್ತು ಅವರು ಹೇಳುವುದೇನೆಂದರೆ, ನಾನು ಇಷ್ಟು ದೊಡ್ಡ ಸಭೆಯಲ್ಲಿ ಕೆಲಸ ಮಾಡುವುದನ್ನು ಕಂಡ ಸಾವಿರಾರು ಜನರು ಯಾವುದೇ ರೀತಿಯ ತೋರಿಕೆಯನ್ನು ಕಂಡಿಲ್ಲ ಎಂದು ನಾನು ಹೇಳಲು ಬಯಸುತ್ತೇನೆ. ಮತ್ತು ಸ್ವಯಂಸೇವಕರು ಹೇಗೆ ನಿಸ್ವಾರ್ಥದಿಂದ ಸೇವೆ ಸಲ್ಲಿಸುತ್ತಿದ್ದರು, ಆದರೆ ಎಲ್ಲರೂ ಒಂದು ಉತ್ಸಾಹದಿಂದ ಕೆಲಸ ಮಾಡುವುದನ್ನು ನೋಡಿದರು.

ನಂತರ ಸ್ಪಾನಿಷ್ ನಿಯೋಗವು ವೃತ್ತಿಯಲ್ಲಿ ಇತಿಹಾಸಕಾರರನ್ನು ಒಳಗೊಂಡಿತ್ತು, ಅವರು ಆರ್ಕೈವಿಸ್ಟ್ ಆಗಿದ್ದಾರೆ ಮತ್ತು ಕಾರ್ಡೋಬಾದ ಅಲ್-ಆಂಡಲಸ್ ಲೈಬ್ರರಿಯಲ್ಲಿ ಕೆಲಸ ಮಾಡುತ್ತಾರೆ. ಜಲ್ಸ ಸಾಲಾನದ ಆಹ್ವಾನದ ಮೇರೆಗೆ ನಾನು ಬಂದಿದ್ದೇನೆ ಎಂದು ಅವರು ಹೇಳುತ್ತಾರೆ, ನಾನು ತುಂಬಾ ಕೃತಜ್ಞನಾಗಿದ್ದೇನೆ. ನಾನು ನಿಮ್ಮಿಂದ ಇಸ್ಲಾಂ ಮತ್ತು ಇಸ್ಲಾಮಿಕ್ ಸಂಸ್ಕೃತಿಯ ಬಗ್ಗೆ ಸಾಕಷ್ಟು ಕಲಿತಿದ್ದೇನೆ ಮತ್ತು ನೀವು ಜನರು ನನ್ನನ್ನು ಬಹಳ ಆತಿಥ್ಯ ಮತ್ತು ಗೌರವದಿಂದ ನಡೆಸಿಕೊಂಡಿದ್ದೀರಿ. ನಾನು ಎಂದಿಗೂ ಮರೆಯಲಾರೆ. ಹಿಂದೆಂದೂ ವಿವಿಧ ಧರ್ಮ ಮತ್ತು ಸಂಸ್ಕೃತಿಗಳ ಜನರು ಇಷ್ಟೊಂದು ಸಂಖ್ಯೆಯಲ್ಲಿ ಒಟ್ಟುಗೂಡಿರದ್ದನ್ನು ನಾನು ನೋಡಲಿಲ್ಲ. ಖಂಡಿತವಾಗಿಯೂ, ಸರ್ವಶಕ್ತನಾದ ಅಲ್ಲಾಹನ ಪ್ರೀತಿಗಾಗಿ ಇವರೆಲ್ಲರೂ ಇಲ್ಲಿ ನೆರೆದಿದ್ದರು. ಇಂದಿನ ಯುಗದಲ್ಲಿ ಅಹ್ಮದಿಯಾ ಜಮಾಅತ್ ನಿಜವಾಗಿಯೂ ದೃಢತೆ ಮತ್ತು ಧೈರ್ಯದ ಉನ್ನತ ಉದಾಹರಣೆಯಾಗಿದೆ ಎಂದು ಅವರು ಹೇಳುತ್ತಾರೆ ಮತ್ತು ನಾನು ಈ ಉದಾಹರಣೆಯನ್ನು ನನ್ನ ದೈನಂದಿನ ಜೀವನದಲ್ಲಿ ಪ್ರತಿದಿನ ನನ್ನ ಮುಂದೆ ಇಡುತ್ತೇನೆ. ನನಗೂ ಇದೊಂದು ಪಾಠ.

ಇಟಲಿಯ ಪತ್ರಕರ್ತ ಮಾರ್ಕೊ ರೆಸ್ಪಿಂಟಿ ಬಂದಿದ್ದರು. ಅವರು ಪತ್ರಿಕೆಯೊಂದರ ಮುಖ್ಯ ಸಂಪಾದಕರಾಗಿದ್ದಾರೆ. ಜಲ್ಸದ ಬಗ್ಗೆ ನಾನು ಮೊದಲು ಕೇಳಿದ್ದೆ ಮತ್ತು ಓದಿದ್ದೇನೆ, ಆದರೆ ಅದರಲ್ಲಿ ಭಾಗವಹಿಸುವುದು ಸಂಪೂರ್ಣವಾಗಿ ವಿಭಿನ್ನ ರೀತಿಯ ಅನುಭವವಾಗಿದೆ ಎಂದು ಅವರು ಹೇಳುತ್ತಾರೆ. ಸ್ವಯಂಸೇವಕರ ಕೆಲಸದಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಇದರೊಂದಿಗೆ, ಗಮನಿಸಲಾದ ಮತ್ತೊಂದು ವಿಷಯವೆಂದರೆ ಅತ್ಯುತ್ತಮ ಶಿಸ್ತು, ಇದು ಅಂತಹ ದೊಡ್ಡ ಸಂಖ್ಯೆಯನ್ನು ಪರಿಗಣಿಸಿ ಬಹಳ ಕಷ್ಟಕರವಾದ ಕೆಲಸವಾಗಿದೆ. ಅಂತಹ ದೊಡ್ಡ ಪ್ರಮಾಣದ ಶಿಸ್ತು ಮತ್ತು ಸ್ವಚ್ಛತೆಯ ವ್ಯವಸ್ಥೆಗಳು ಸಾಮಾನ್ಯ ಸಂಗತಿಯಲ್ಲ ಎಂದು ಹೇಳಿದರು, ಆದರೆ ಜಲ್ಸಾ ಸಾಲಾನದಲ್ಲಿ ನಾನು ನೋಡಿದ ಪ್ರಮುಖ ವಿಷಯವೆಂದರೆ ನಮಾಝ್ ಆಗಿದೆ.

ನಮಾಝ್ ಪ್ರತಿಯೊಬ್ಬ ವ್ಯಕ್ತಿಗೂ ವಿಶೇಷ ಸ್ಥಾನಮಾನವನ್ನು ಹೊಂದಿತ್ತು, ಅವರು ಹೇಳುತ್ತಾರೆ ನಾನು ಮುಸ್ಲಿಮನಲ್ಲದಿದ್ದರೂ, ಅಹ್ಮದೀಯರು ಪ್ರಾರ್ಥಿಸುವ ರೀತಿಯಲ್ಲಿ, ಅದು ಪ್ರತಿಯೊಬ್ಬ ಮನುಷ್ಯನ ಆದ್ಯ ಕರ್ತವ್ಯ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. ಅಲ್ಲಿದ್ದ ಸಾವಿರಾರು ಜನರ ಸಮರ್ಪಣಾ ಭಾವ ಮತ್ತು ಗಾಂಭೀರ್ಯವನ್ನು ಕಂಡು ನನಗೆ ತುಂಬಾ ಸಂತೋಷವಾಯಿತು. ಪತ್ರಕರ್ತನಾಗಿದ್ದ ನಾನು ಸಾಕಷ್ಟು ಜನರನ್ನು ಭೇಟಿಯಾಗಿದ್ದೇನೆ. ನಾನು ಹೊಸ ಜನರನ್ನು, ಹಳೆಯ ಜನರನ್ನು, ಅನೇಕ ಪರಿಚಯಸ್ಥರನ್ನು ಭೇಟಿಯಾದೆ ಮತ್ತು ನಂತರ ನಾನು ಅಹ್ಮದಿಯಾ ಜಮಾತ್‌ನ ಇತಿಹಾಸದ ಬಗ್ಗೆ ಸಾಕಷ್ಟು ತಿಳಿದುಕೊಂಡೆ.

ಸೆನೆಗಲ್‌ನ ಕೋಲ್ಡಾ ರೀಜನ್‌ನ ಗವರ್ನರ್ ಸೆರಾಂಡೌ ಕೂಡ ಆಗಮಿಸಿದ್ದರು. ಅವರು ಹೇಳುತ್ತಾರೆ, ನಾನು ಮೊದಲ ಬಾರಿಗೆ ಜಲ್ಸಾಗೆ ಆಗಮಿಸಿದ್ದೇನೆ ಮತ್ತು ನಾನು ಜಲ್ಸಾದಲ್ಲಿ ಕಂಡ ಶಿಸ್ತು ಇಂದು ಹಿಂದೆಂದೂ ಕಾಣಲಿಲ್ಲ ಎಂದು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅಹ್ಮದೀಯರಿಗೆ ಖಲೀಫತುಲ್ ಮಸೀಹ್ ಅವರ ಬಗ್ಗೆ ಇರುವ ಪ್ರೀತಿ ಪದಗಳಲ್ಲಿ ಹೇಳಲು ಸಾಧ್ಯವಿಲ್ಲ.

ನಾನು ರಾಜ್ಯಪಾಲನಾಗಿ ಸಾಕಷ್ಟು ಪ್ರವಾಸ ಮಾಡಿದ್ದೇನೆ ಆದರೆ ಅಂತಹ ಪ್ರೀತಿಯನ್ನು ನಾನು ನೋಡಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಉಲ್ಲೇಖಗಳನ್ನು ಓದಿದರು ಅವುಗಳು ಸಹ ನನ್ನ ಮನಸ್ಸಿನಲ್ಲಿ ಪ್ರವೇಶಿಸಿದೆ ಎಂದು ಹೇಳುತ್ತಾರೆ. ಅದರು ಪ್ರಭಾವ ನನ್ನ ಹೃದಯದ ಮೇಲೆ ಬೀರಿದೆ. ಈ ಜಲ್ಸದಲ್ಲಿ ನಾನು ಕಂಡ ವಿಶೇಷವೆಂದರೆ ತ್ಯಾಗ ಮನೋಭಾವನೆ ಎನ್ನುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಜಲ್ಸಾದ ಮೂಲ ಉದ್ದೇಶಗಳಲ್ಲಿ ಒಂದು ಉದ್ದೇಶವು ಪರಸ್ಪರ ತ್ಯಾಗ ಮಾಡುವುದು ಎಂದು ಹೇಳಿದ್ದಾರೆ. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ-6, ಪುಟ-395) ಅದು ಅವರು ಅಲ್ಲಿ ಕಂಡಿದ್ದಾರೆ. ಅವರು ಹೇಳುತ್ತಾರೆ: ಪ್ರತಿಯೊಬ್ಬರೂ ತಮ್ಮಿಗಿಂತ ಇತರರಿಗೆ ಆದ್ಯತೆ ನೀಡುತ್ತಾರೆ. ನನ್ನ ವಿದ್ಯಾರ್ಥಿ ದಿನಗಳಲ್ಲಿ ನಾನು ಖಿಲಾಫತ್ ಬಗ್ಗೆ ಕೇಳಿದ್ದೇನೆ, ಆದರೆ ನಾನು ವಾಸ್ತವವಾದ ಮತ್ತು ನಿಜವಾದ ಖಿಲಾಫತ್ ಅನ್ನು ಜಮಾಅತ್ ಅಹ್ಮದಿಯಾದಲ್ಲಿ ಮಾತ್ರ ನೋಡಿದ್ದೇನೆ. ಇಡೀ ಮುಸ್ಲಿಂ ಉಮ್ಮಾ ಅಹ್ಮದೀಯ ಜಮಾಅತ್ ಅನ್ನು ಅನುಸರಿಸಿದರೆ, ಖಂಡಿತವಾಗಿಯೂ ಮುಸ್ಲಿಮರು ಯಶಸ್ವಿಯಾಗುತ್ತಾರೆ.

ಕೊಲಂಬಿಯಾದ ಅತಿಥಿ ಶ್ರೀ ರೊಜೊ ವೆಲೆನ್ಸಿಯಾ ಸಾಹಿಬ್ ಅವರು ಹೇಳಿದರು, ಶಾಂತಿಯುತ ವಾತಾವರಣ, ಸಹೋದರತ್ವ, ಪ್ರೀತಿ, ಖಲೀಫರ ಭಾಷಣಗಳು ಮತ್ತು ಜಮಾಅತ್‌ನ ಜನರಿಂದ ನಾನು ತುಂಬಾ ಪ್ರಭಾವಿತನಾಗಿದ್ದೇನೆ. ಜಲ್ಸ ಸಾಲಾನದಲ್ಲಿ ನಾನು ಕಂಡದ್ದು ನನಗೆ ಭರವಸೆ ಮತ್ತು ಉತ್ತೇಜನವನ್ನು ನೀಡುತ್ತದೆ, ಕಷ್ಟದ ಸಮಯಗಳ ಹೊರತಾಗಿಯೂ, ವಿಷಯಗಳನ್ನು ಉತ್ತಮಗೊಳಿಸಬಹುದು ಎಂದು ನಾವು ನಂಬಬೇಕು. ದೇವರು ನಮ್ಮೊಂದಿಗಿದ್ದಾನೆ ಎಂದು ಅವರು ಹೇಳುತ್ತಾರೆ. ಖಲೀಫರ ಸಂದೇಶವು ನನ್ನ ಆತ್ಮವನ್ನು ತಲುಪುತ್ತದೆ ಏಕೆಂದರೆ ಶಾಂತಿಯು ಕೇವಲ ಅಂತ್ಯವಲ್ಲ ಬದಲಿಗೆ ಉತ್ತಮ ಜೀವನಕ್ಕೆ ಸಾಧನವಾಗಿದೆ. ಮತ್ತು ಸ್ವಯಂಸೇವಕರನ್ನು ಹೊಗಳುತ್ತಾರೆ. ಅದೊಂದು ಅದ್ಭುತ ವ್ಯವಸ್ಥೆಯಾಗಿತ್ತು. ಆತಿಥ್ಯ ಅದ್ಭುತವಾಗಿತ್ತು. ಅವರು ಹೇಳುತ್ತಾರೆ ನಾನು ಎಲ್ಲೆಡೆ ಮುಗುಳುನಗುವನ್ನು ನೋಡಿದೆ. ಜಲ್ಸಾ ಸಾಲಾನದ ಸ್ವಯಂಸೇವಾ ಸೇವೆಗಳು ಜಗತ್ತಿಗೆ ಮಾದರಿಯಾಗಿದೆ ಮತ್ತು ದೇವರನ್ನು ಹುಡುಕುವವರಿಗೆ ಪ್ರೀತಿಯ ಪಾಠವಾಗಿದೆ.

ಮತ್ತೆ ಯುಕೆಯಲ್ಲಿ ಅರ್ಜೆಂಟೀನಾದ ರಾಯಭಾರಿ ಜೇವಿಯರ್ ಫಿಗುರೋವಾ ಅವರು ಜಲ್ಸದ ಮೊದಲ ದಿನದಂದು ಹಾಜರಿದ್ದರು. ಅವರು ಜಲ್ಸದ ಏರ್ಪಾಡುಗಳು ಮತ್ತು ವಾತಾವರಣದಿಂದ ಪ್ರಭಾವಿತರಾದರು, ನಂತರ ಅವರು ಸಭೆಯಲ್ಲಿ ಭಾಗವಹಿಸಿದ್ದ ಅರ್ಜೆಂಟೀನಾ ಮತ್ತು ನೆರೆಯ

ಲ್ಯಾಟಿನ್ ಅಮೇರಿಕನ್ ದೇಶಗಳ ನಿಯೋಗಗಳನ್ನು ಔಪಚಾರಿಕ ಸಮಾರಂಭಕ್ಕಾಗಿ ತಮ್ಮ ರಾಯಭಾರ ಕಚೇರಿಗೆ ಆಹ್ವಾನಿಸಿದರು. ಸಭೆಯನ್ನು ಆಯೋಜಿಸುವ ಮೂಲಕ ಸ್ವಂತ ರಾಯಭಾರ ಕಚೇರಿಯನ್ನು ಸಹ ಪರಿಚಯಿಸಬೇಕು. ಅವರು ಜಮಾಅತ್‌ನ ಬೋಧನೆಗಳು ಮತ್ತು ವಿಶೇಷವಾಗಿ ಪ್ರಾಯೋಗಿಕ ಸ್ವಭಾವದಿಂದ ಬಹಳ ಪ್ರಭಾವಿತರಾದರು ಮತ್ತು ತಾವು ಸಂಪೂರ್ಣವಾಗಿ ಬೆಂಬಲಿಸಲು ಸಿದ್ಧರಿದ್ದೇವೆ ಮತ್ತು ಜಮಾಅತ್ ಅನ್ನು ವಿಶೇಷವಾಗಿ ರಾಜಕೀಯ ವರ್ಗ ಮತ್ತು ರಾಜತಾಂತ್ರಿಕರಿಗೆ ಪರಿಚಯಿಸಲು ಪ್ರಯತ್ನಿಸುತ್ತೇವೆ ಎಂದು ತಮ್ಮ ಬಯಕೆಯನ್ನು ವ್ಯಕ್ತಪಡಿಸಿದರು.

ಚಿಲಿಯಿಂದ ಮೂರು ಜನರು ಬಂದಿದ್ದರು, ಅವರು ಕ್ರಿಶ್ಚಿಯನ್ ಸಂಘಟನೆಯ ಜನರಾಗಿದ್ದಾರೆ. ಅವರಲ್ಲಿ, ಡಾ. ನೆಸ್ಟರ್ ಸೋಟೊ ಕ್ರಿಶ್ಚಿಯನ್ ಪಾದ್ರಿ ಮತ್ತು ಧರ್ಮಶಾಸ್ತ್ರಜ್ಞರಾಗಿದ್ದಾರೆ. ಚಿಲಿಯಲ್ಲಿ ಕ್ರಿಶ್ಚಿಯನ್ ಸಂಘಟನೆಯ ಸ್ಥಾಪಕರಾಗಿದ್ದಾರೆ. ಜಮಾಅತ್‌ನ ಐಕ್ಯತೆ ಮತ್ತು ಪರಸ್ಪರ ಪ್ರೀತಿ ನನ್ನನ್ನು ಹೆಚ್ಚು ಪ್ರಭಾವಿಸಿದೆ ಎಂದು ಅವರು ಹೇಳುತ್ತಾರೆ.

ಪುನಃ ಅವರು ಹೀಗೂ ಹೇಳುತ್ತಾರೆ ನಾನು ನಲವತ್ತು ವರ್ಷಗಳಿಂದ ಪ್ರಪಂಚದಾದ್ಯಂತ ವಿವಿಧ ಕ್ರಿಶ್ಚಿಯನ್ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ, ಆದರೆ ಜಮಾಅತ್ ಅಹ್ಮದಿಯಾ ಮತ್ತು ಅದು ಕೇವಲ ಸ್ವಯಂಸೇವಕ ಕಾರ್ಯಕರ್ತರನ್ನು ಒಳಗೊಂಡಿರುವಂತಹ ವಿಸ್ತಾರವಾದ ಕಾರ್ಯಕ್ರಮವನ್ನು ನಾನು ನೋಡಿಲ್ಲ. ಬಹಳಷ್ಟು ಪ್ರಭಾವವಂತ ಜನರಿದ್ದಾರೆ. ಅವರು ಯುನೈಟೆಡ್ ಸ್ಟೇಟ್ಸ್ ಅಧ್ಯಕ್ಷರು ಮತ್ತು ಯುನೈಟೆಡ್ ಸ್ಟೇಟ್ಸ್ ಸರ್ಕಾರದೊಂದಿಗೆ ಸಂಪರ್ಕವನ್ನು ಹೊಂದಿದ್ದಾರೆ ಮತ್ತು ಅಲ್ಲಿಯೂ ಅವರು ಪ್ರಪಂಚದಾದ್ಯಂತದ ಧಾರ್ಮಿಕ ಜನರನ್ನು ಒಟ್ಟುಗೂಡಿಸುವ ಮೂಲಕ ಧಾರ್ಮಿಕ ಸಭೆಗಳನ್ನು ಆಯೋಜಿಸುತ್ತಾರೆ. ತಮ್ಮ ಅಭಿಪ್ರಾಯದಲ್ಲಿ ನಮ್ಮ ಜಮಾಅತ್‌ನ ಜಲ್ಸದ ಯಶಸ್ಸಿನ ಗುಟ್ಟು ನಮ್ಮ ಒಗ್ಗಟ್ಟಾಗಿದ್ದು, ಅದು ಖಿಲಾಫತ್ ಅಸ್ತಿತ್ವದಿಂದ ಸ್ಥಾಪಿತವಾಗಿದೆ ಎಂದು ಅವರು ಹೇಳಿದರು.

(ಮತ್ತು ಖಿಲಾಫತ್ ಕೂಡ ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಸ್ಥಾಪಿತವಾಗಿದೆ). ಜಮಾಅತ್ ಸ್ಥಾಪನೆಯಾಗಿ ನೂರಾ ಮೂವತ್ತು ವರ್ಷಗಳೇ ಕಳೆದಿದ್ದು, ಇದುವರೆಗೆ ನಮ್ಮಲ್ಲಿ ಯಾವುದೇ ದೊಡ್ಡ ಒಡಕು, ಮತೀಯ ಭೇದಗಳು ಉಂಟಾಗದಿರುವುದು ಪವಾಡವೇ ಸರಿ ಎಂದು ಅಭಿಪ್ರಾಯಪಟ್ಟರು. ನಮ್ಮ ಇವಾಂಜೆಲಿಕಲ್ ಕ್ರಿಶ್ಚಿಯನ್ ಸಂಸ್ಥೆಗಳಲ್ಲಿ ಮತ್ತು ಅದೇ ರೀತಿ ಇತರ ಇಸ್ಲಾಮಿಕ್ ಸಂಸ್ಥೆಗಳಲ್ಲಿ ದೊಡ್ಡ ದೌರ್ಬಲ್ಯವೆಂದರೆ ನಾಯಕತ್ವವನ್ನು ಸಾಧಿಸಲು ಪರಸ್ಪರ ವಿವಾದಗಳು ಮತ್ತು ಭಿನ್ನಾಭಿಪ್ರಾಯಗಳಾಗಿವೆ ಎಂದು ಅವರು ಹೇಳಿದರು. ಅದಕ್ಕೆ ವ್ಯತಿರಿಕ್ತವಾಗಿ, ನಿಮ್ಮ ಜಲ್ಸಗಳು ಮತ್ತು ಕಾರ್ಯಕ್ರಮಗಳ ಏರ್ಪಾಡುಗಳನ್ನು ನೋಡಿದರೆ, ನಿಮ್ಮ ಜಮಾಅತ್ ಒಂದು ದೇಹದಂತೆ ಇದೆ ಎಂದು ತಿಳಿಯುತ್ತದೆ ಎಂದು ಅವರು ಹೇಳಿದರು. ಖಲೀಫ ಎ ವಕ್ತ್ ಈ ದೇಹದ ತಲೆ ಮತ್ತು ಮೆದುಳು ಮತ್ತು ಉಳಿದ ಜಮಾಅತ್ ಒಂದು ದೇಹದ ಅಂಗಗಳ ರೀತಿಯಲ್ಲಿದೆ ಅವು ಮೆದುಳಿನ ಸಂಕೇತಗಳು ಮತ್ತು ಸೂಚನೆಗಳ ಅಡಿಯಲ್ಲಿ ಚಲಿಸುತ್ತಿವೆ. ಹೀಗೆ, ಅನ್ಯರು ಖಿಲಾಫತ್‌ನ ಮಹತ್ವವನ್ನು ಅಂದಾಜು ಮಾಡುತ್ತಾರೆ.

ಸ್ಪೇನಿನಿಂದ ಬಂದ ಜಮಾಅತಿನ ಬಗ್ಗೆ ಅನ್ವೇಷಣೆ ನಡೆಸುತ್ತಿರುವ ಓರ್ವ ಸ್ನೇಹಿತರು ಏಲೋ ಪೆರೇಝ್ ಸಾಹಿಬ್ ಹೇಳುತ್ತಾರೆ: ಈ ಜಲ್ಸದಲ್ಲಿ ನನ್ನೊಂದಿಗೆ ಅರಸನಿಗಿಂತ ಉತ್ತಮವಾಗಿ ವರ್ತಿಸಲಾಯಿತು. ಬಹಳ ಉತ್ತಮವಾಗಿ ವರ್ತಿಸಿದರು. ಅಹ್ಮದೀ ಸ್ವಯಂ ಸೇವಕರು ನಲ್ವತ್ತು ಸಾವಿರಕ್ಕೂ ಮೇಲ್ಪಟ್ಟು ಇರುವ ಈ ಅತಿಥಿಗಳ ಸೇವೆಯನ್ನು ಆಯಾಸಗೊಳ್ಳದೇ ಮಾಡುವುದು ಒಂದು ಪವಾಡವೇ ಆಗಿದೆ. ಛಾಯಾಚಿತ್ರ ಪ್ರದರ್ಶನಗಳಲ್ಲಿ ಭಾಗವಹಿಸಿದಾಗ ನಾನು ಅಹ್ಮದಿ ಸಮುದಾಯದ ಬಗ್ಗೆ ಸಾಕಷ್ಟು ಕಲಿತಿದ್ದೇನೆ. ಇದು ಇತಿಹಾಸದ ರೋಮಾಂಚಕ ಮತ್ತು ಜೀವಂತ ತುಣುಕಾಗಿದೆ. ಸಮಾರಂಭದಲ್ಲಿ ನಾನು ಸಹೋದರತ್ವದ ವಾತಾವರಣವನ್ನು ಅನುಭವಿಸಿದೆ. ಅವರು ಹೇಳುತ್ತಾರೆ, ನಾನು ಅಲ್ಲಾಹನೊಂದಿಗೆ ಸಂಪರ್ಕ ಹೊಂದಿದ್ದೇನೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ, ಆದರೂ ನಾನು ಮುಸ್ಲಿಂ ಅಲ್ಲ, ಆದರೆ ಸರ್ವಶಕ್ತನಾದ ಅಲ್ಲಾಹನು ವಿವಿಧ ಧರ್ಮಗಳಿಗೆ ಸಾಮಾನ್ಯವಾಗಿದ್ದಾನೆ. ಜಲ್ಸದಲ್ಲಿ ನಿಸ್ಸಂದೇಹವಾಗಿ ಅಲ್ಲಾಹನು ನಿಮ್ಮೊಂದಿಗೆ ಮತ್ತು ಎಲ್ಲಾ ಅಹ್ಮದೀಯರೊಂದಿಗೆ ಕಾಣಿಸಿಕೊಂಡನು ಮತ್ತು ಭಾನುವಾರದಂದು ಅಹ್ಮದಿ ಸಮುದಾಯವು ತಮ್ಮ ನಂಬಿಕೆಯನ್ನು ನವೀಕರಿಸುವುದನ್ನು ನೋಡಿ ನಾನು ತುಂಬಾ ಭಾವುಕನಾಗಿದ್ದೆ. ಅವರಲ್ಲಿ ಹೆಚ್ಚಿನವರು ಭಾವನೆ ಮತ್ತು ಸಂತೋಷದಿಂದ ಅಳುತ್ತಿದ್ದರು. ಸಹಾನುಭೂತಿ ಇಲ್ಲದ ಧರ್ಮವು ಧರ್ಮವಲ್ಲ ಎಂಬ ನಿರ್ದಿಷ್ಟ ಸಂದೇಶಗಳನ್ನು ನನ್ನೊಂದಿಗೆ ತೆಗೆದುಕೊಂಡು ಹೋದ ಭಾಷಣಗಳು ನನಗೆ ಬಹಳ ಇಷ್ಟವಾಗುತ್ತವೆ, ಮನುಕುಲದ ಬಗ್ಗೆ ಕರುಣೆ ಇಲ್ಲದ ಮುಸ್ಲಿಂ ಮುಸ್ಲಿಂ ಅಥವಾ ಅಲ್ಲಾಹನ ಅನುಯಾಯಿ ಅಲ್ಲ. ಮಸೀದಿಯಲ್ಲಿ ಬಡವ ಶ್ರೀಮಂತ ಎಂಬ ಭೇದವಿಲ್ಲ. ನಾನು ಹೆಚ್ಚು ಇಷ್ಟಪಟ್ಟದ್ದು (ಅವರು ನಂತರ ನನಗೆ ಬರೆದರು) ನಿಮ್ಮನ್ನು ವೈಯಕ್ತಿಕವಾಗಿ ಭೇಟಿಯಾಗುವುದು ಮತ್ತು ಅವರು ತಮ್ಮ ಟೀ ಶರ್ಟ್ ಮೇಲೆ ನನ್ನ ಸಹಿ ಹಾಕಿಸಿಕೊಳ್ಳಲು ಬಯಸಿದ್ದರು.

ಕೈಲ್ ಸೀಬ್ಯಾಕ್ ಅವರು ಕೆನಡದಿಂದ ಬಂದ ಒಬ್ಬ ಪಾರ್ಲಿಮೆಂಟ್ ಸದಸ್ಯ ಅವರು ಹೇಳುತ್ತಾರೆ: ಜಲ್ಸದಲ್ಲಿ ನನಗೆ ಬರಲು ಸಾಧ್ಯವಾದದ್ದು ಒಂದು ಮಹತ್ತಾದ ಸಂಗತಿಯಾಗಿದೆ. ಸ್ವಂತ ಧರ್ಮದೊಂದಿಗೆ ನಿಷ್ಠೆ ತೋರಿಸುವ ಮತ್ತು ಸ್ವಂತ ಇಷ್ಟದಿಂದ ಕೆಲಸ ಮಾಡುವ ಪಾಠ ಈ ಜಲ್ಸದಿಂದ ಲಭಿಸುತ್ತದೆ. ಮತ್ತೆ ಅವರು ಜಮಾಅತ್ ಅಹ್ಮದಿಯಾದ ಮೇಲೆ ನಡೆಯುತ್ತಿರುವ ಹಿಂಸೆಗಳ ಬಗ್ಗೆ ಹೇಲುತ್ತಾರೆ: ಇಡೀ ವಿಶ್ವವು ಇದರ ವಿರುದ್ಧ ನಿಂತು ಅಹ್ಮದೀಯ ಸಮುದಾಯವನ್ನು ಬೆಂಬಲಿಸಬೇಕು ಮತ್ತು ಅಹ್ಮದಿ ವಕೀಲರಿಗೆ ಸಹಾಯ ಮಾಡಬೇಕು. ಅಹ್ಮದೀಯ ಮಸೀದಿಗಳನ್ನು ಕೆಡವುತ್ತಿರುವ ಬಗ್ಗೆ ಧ್ವನಿ ಎತ್ತಬೇಕು. ಆ ನಂತರ ಅವರು ಹೇಳುತ್ತಾರೆ ವಿಷಯಗಳ ಬಗ್ಗೆ ನೋಟ್ಸ್ ತೆಗೆದುಕೊಳ್ಳಲು ಒಂದು ಡೈರಿ ತಂದಿದ್ದೆ, ಆದರೆ ಮಾತುಳನ್ನು ಆಲಿವುದರಲ್ಲಿ ಎಷ್ಟು ತಲ್ಲೀನನಾಗಿದೆ ಎಂದರೆ ನಾನು ನೋಟ್ ಮಾಡಿಕೊಳ್ಳಲು ನೆನಪೇ ಇರಲಿಲ್ಲ.

ಕೆನಡಾದ ಸ್ಥಳೀಯ ರಾಷ್ಟ್ರದ ಉಪಾಧ್ಯಕ್ಷ ಅಲಿ ಬೇರ್ ಓರ್ವ ಮಹಿಳೆ ಅಥಿತಿಯಾಗಿದ್ದರು ಅವರು ಹೇಳುತ್ತಾರೆ: ಈ ವರ್ಷ ನನ್ನ ಇತರ ಅನೇಕ ಸ್ಥಳೀಯ ನಾಯಕರೊಂದಿಗೆ ಜಲ್ಸಕ್ಕೆ ಆಗಮಿಸಿರುವುದು ನನಗೆ ಸಂತೋಷ ತಂದಿದೆ. ಜಾಗತಿಕ ಬೈಅತ್ ಸಮಾರಂಭವು ನನಗೆ ಬಹಳ ಭಾವನಾತ್ಮಕ ಸಂದರ್ಭವಾಗಿತ್ತು. ಪ್ರತಿಯೊಬ್ಬ ಮನುಷ್ಯನನ್ನು ಪರಸ್ಪರ ಹತ್ತಿರ ತರುವ ಇಂತಹ ಸಮಾರಂಭವನ್ನು ನಾನು ನನ್ನ ಜೀವನದಲ್ಲಿ ನೋಡಿರಲಿಲ್ಲ. ಎಲ್ಲರೂ ಭಾವುಕರಾಗಿದ್ದರು ಮತ್ತು ನಾನು ಸಹ ಭಾವುಕರಾಗಿ ಅಳುತ್ತಿದ್ದೆ.

ಜಾಗತಿಕ ಬೈಅತ್ ಸಮಾರಂಭವು ನಮ್ಮ ಆರಾಧನೆಯಂತೆಯೇ ಇದೆ, ಆದರೆ ಜಾಗತಿಕ ಬೈಅತ್ ಸಮಯದಲ್ಲಿ ನಾನು ಮಾಡಿದಂತಹ ಆಧ್ಯಾತ್ಮಿಕತೆಯನ್ನು ನನ್ನ ಆರಾಧನೆಯಲ್ಲಿ ನಾನು ಎಂದಿಗೂ ಅನುಭವಿಸಲಿಲ್ಲ.

ನಾನು ಪ್ರೀತಿ ಮತ್ತು ಶಾಂತಿಯ ಸಂದೇಶದೊಂದಿಗೆ ಹಿಂತಿರುಗುತ್ತಿದ್ದೇನೆ ಮತ್ತು ನಿಮ್ಮ ಸಂದೇಶವನ್ನು ನನ್ನ ರಾಷ್ಟ್ರಕ್ಕೆ ತಿಳಿಸುತ್ತೇನೆ, "ಎಲ್ಲರಿಗೂ ಪ್ರೀತಿ, ಯಾರನ್ನೂ ದ್ವೇಷಿಸಬೇಡಿ" ಮತ್ತು ಇಲ್ಲಿಗೆ ಬಂದಿರುವುದು ನನಗೆ ದೊಡ್ಡ ಗೌರವ ಮತ್ತು ಹೆಮ್ಮೆಯ ವಿಷಯವಾಗಿದೆ.

ಹೊಂಡುರಾಸ್‌ನ ಮಹಿಳಾ ಟಿವಿ ನಿರೂಪಕಿಯೊಬ್ಬರು ಹೇಳುತ್ತಾರೆ: ನಾನು ಖಲೀಫರ ಭಾಷಣಗಳನ್ನು ಬಹಳ ಎಚ್ಚರಿಕೆಯಿಂದ ಆಲಿಸಿದೆ, ಜಲ್ಸದಲ್ಲಿ ಬಂದು ಸೇರಿದೆ, ಭಾಷಣಕಾರರ ಭಾಷಣಗಳನ್ನು ಆಲಿಸಿದೆ. ಅಂತಹ ಉತ್ತಮ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ ಎಂದು ಭಾವಿಸುತ್ತೇನೆ. ನನಗೆ ಅನೇಕ ಜನರನ್ನು ಭೇಟಿಯಾಗುವ ಅವಕಾಶ ಲಭಿಸಿತು ಮತ್ತು ಅವರಲ್ಲಿ ನಿಸ್ವಾರ್ಥ ಸೇವಾ ಮನೋಭಾವ, ವಿನಯವನ್ನು ಕಂಡೆ. ಇವತ್ತಿನವರೆಗೂ ಎಲ್ಲಿಯೂ ನೋಡದ ಇಂತಹ ವ್ಯವಸ್ಥಿತ ವ್ಯವಸ್ಥೆಯನ್ನು ನೋಡಿದೆ. ನನ್ನ ಲಜ್‌ನ ಸಮಾರಂಭದ ಭಾಷಣದ ನಂತರ ಅವರು ಹೇಳುತ್ತಾರೆ: ಹೊಂಡುರಾಸ್‌ನಲ್ಲಿ ನಮ್ಮೆಲ್ಲರ ಅವಶ್ಯಕತೆ ಇದೆ. ಮಹಿಳೆಯರ ಹಕ್ಕುಗಳ ಬಗ್ಗೆ, ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಪ್ರತ್ಯೇಕ ವಿಡಿಯೋ ಮಾಡುತ್ತೇನೆ ಎಂದರು.

ಕೆಲವು ಪ್ರಿಂಟಿಂಗ್ ಪ್ರೆಸ್ ಮಾಲೀಕರು ಟರ್ಕಿಯಿಂದ ಬಂದಿದ್ದರು. ಅವರು ನಮ್ಮ ವಿವಿಧ ಪುಸ್ತಕಗಳು ಮತ್ತು ಸಾಹಿತ್ಯವನ್ನು ಪ್ರಕಟಿಸಿದ್ದಾರೆ. ಪವಿತ್ರ ಖುರ್‌ಆನ್ ಕೂಡ ಅಲ್ಲಿಂದಲೇ ಬಹಳ ಸುಂದರವಾಗಿ ಪ್ರಕಟವಾಗಿದೆ, ನೀವು ಅದನ್ನು ಬುಕ್ ಸ್ಟಾಲ್ ನಲ್ಲಿ ನೋಡಿರಬೇಕು. ಮುದ್ರಣಾಲಯದ ಮಾಲೀಕರು ಬಂದಿದ್ದರು. ಅವರ ನಿರ್ದೇಶಕರು ಹೇಳುತ್ತಾರೆ: ಇಂತಹ ಕೆಟ್ಟ ಹವಾಮಾನದಲ್ಲಿ ಯಾವುದೇ ದೊಡ್ಡ ಸಮಸ್ಯೆಯಿಲ್ಲದೆ ನೀವು ಇಷ್ಟು ದೊಡ್ಡ ಸಭೆಯನ್ನು ಆಯೋಜಿಸಿದ ರೀತಿ ನನಗೆ ಅದ್ಭುತವಾಗಿದೆ. ಅವರು ಹೇಳುತ್ತಾರೆ: ನನಗೆ ಒಂದು ವಿಷಯ ಬಹಳ ವಿಚಿತ್ರ ಎನಿಸಿತು (ಇದು ಸಹ ಅನ್ಯರ ಮೇಲೆ ಪ್ರಭಾವ ಬೀರುತ್ತದೆ ತಬ್ಲೀಗ್‌ನ ಪರಿಣಾಮವೂ ಆಗಿದೆ) ಅವರು ಇಷ್ಟು ದೊಡ್ಡ ಸಭೆಯಲ್ಲಿ ಧೂಮಪಾನ ಮಾಡುವವರನ್ನು ನಾನು ನೋಡಿಲ್ಲ. ಮತ್ತು ಕಾರ್ಯನಿರ್ವಹಿಸುತ್ತಿದ್ದ ಸ್ವಯಂ ಸೇವಕರು ಕ್ರಮಬದ್ಧವಾಗಿ ಮತ್ತು ವಿಧೇಯವಾಗಿ ವರ್ತಿಸಿದರು. ಜನರು ಸಹ ಅವರನ್ನು ಪಾಲಿಸುತ್ತಿದ್ದರು. ಸಣ್ಣ ಮಕ್ಕಳು, ಕೆಲಸಗಾರರು, ಹುಡುಗರು ಮತ್ತು ಯುವಕರ ಆದೇಶಗಳನ್ನು ಜನರು ಪಾಲಿಸುತ್ತಿರುವುದು ವಿಚಿತ್ರ ದೃಶ್ಯವಾಗಿತ್ತು.

ಇನ್ನೋರ್ವ ನಿರ್ದೇಶಕರು ಇನ್ನೊಂದು ಕಂಪನಿಯವರು ಹೇಳುತ್ತಾರೆ: ನನಗೆ ಜಮಾಅತ್‌ನ ಇಷ್ಟು ಗಾತ್ರದ ಕಲ್ಪನೆ ಇರಲಿಲ್ಲ. ಪ್ರದರ್ಶನದ ವೇಳೆ ಹುತಾತ್ಮರ ಗ್ಯಾಲರಿ ನೋಡಿದಾಗ ಈ ಕಾಲದಲ್ಲೂ

ಇಸ್ಲಾಂ ಹೆಸರಿನಲ್ಲಿ ಇಷ್ಟೊಂದು ಹಿಂಸಾಚಾರ ನಡೆಯುತ್ತಿದೆ ಎಂದು ಆಶ್ಚರ್ಯವಾಯಿತು. ಅದೂ ಮುಸ್ಲಿಂ ರಾಷ್ಟ್ರದಲ್ಲಿ. ಅಪ್ಪ–ಮಗ ಇಬ್ಬರೂ ಬಂದಿದ್ದರು. ಅವರು ಹೇಳುತ್ತಾರೆ ಜಲ್ಸ ಸಾಲಾನದ ಸಮಯದಲ್ಲಿ ನಡೆಯಬೇಕಿದ್ದ ಅತ್ಯಂತ ಮಹತ್ವದ ವ್ಯವಹಾರ ಸಭೆಯ ಕಾರಣ ನಾವು ಬರಲು ನಿರ್ಧರಿಸಿರಲಿಲ್ಲ, ಆದರೆ ಕೆಲವು ಕಾರಣಗಳಿಂದ ಸಭೆಯನ್ನು ರದ್ದುಗೊಳಿಸಲಾಯಿತು ಮತ್ತು ನಾವು ಈ ಜಲ್ಸಗೆ ಹಾಜರಾಗಲು ನಿರ್ಧರಿಸಿದ್ದೇವೆ ಮತ್ತು ಹೀಗೆ ಸಂಭವಿಸಿದ್ದು ನಮಗೆ ಬಹಳ ಉತ್ತಮವಾಯಿತು ಏಕೆಂದರೆ ಇದು ಮರೆಯಲಾಗದ ಅನುಭವವಾಗಿದೆ.

ಲಾಟ್ವಿಯಾದಿಂದ ಜಲ್ಸಗೆ ಆಗಮಿಸಿದ್ದ ಸಾಮಾಜಿಕ ಕಾರ್ಯಕರ್ತರೊಬ್ಬರು ಹೇಳೂತ್ತಾರೆ: ನನಗೆ ಅಹ್ಮದಿಯಾ ಜಮಾಅತ್ ಬಗ್ಗೆ ಹೆಚ್ಚು ತಿಳಿದಿರಲಿಲ್ಲ ಆದರೆ ಜಲ್ಸದಲ್ಲಿ ನಾನು ಅಹ್ಮದಿಯಾ ಇಸ್ಲಾಂ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದೇನೆ. ನಾನು ಹಿಂತಿರುಗಿ ಪವಿತ್ರ ಖುರ್‌ಆನ್ ಅನ್ನು ಅಧ್ಯಯನ ಮಾಡುತ್ತೇನೆ ಮತ್ತು ಇಸ್ಲಾಂ ಧರ್ಮದ ಬಗ್ಗೆ ನನ್ನ ಜ್ಞಾನವನ್ನು ವಿಸ್ತರಿಸಲು ಪ್ರಯತ್ನಿಸುತ್ತೇನೆ. ಜಲ್ಸ ಸಾಲಾನದ ವಾತಾವರಣವು ತುಂಬಾ ಶಾಂತ ಮತ್ತು ಶುದ್ಧವಾಗಿತ್ತು. ಪ್ರತಿ ಮುಖದಲ್ಲೂ ನಗು ಇತ್ತು. ಎಲ್ಲಾ ಸ್ವಯಂ ಸೇವಕರು ನಮ್ಮನ್ನು ಬಹಳ ಉತ್ತಮವಾಗಿ ನೋಡಿಕೊಂಡರು. ಜಲ್ಸಾ ಸಾಲಾನದ ಆತಿಥ್ಯ ಮತ್ತು ದಯೆಯ ಬಗ್ಗೆ ನನ್ನ ಹೃದಯವು ಅನಿಸಿಕೆಗಳಿಂದ ತುಂಬಿಕೊಂಡಿದೆ, ಆದರೆ ಮಾತುಗಳಲ್ಲಿ ಅದನ್ನು ವಿವರಿಸಲು ಸಾಧ್ಯವಿಲ್ಲ.

ಟಿ.ವಿ.ಯಲ್ಲಿ ಜಲ್ಸ ನೋಡಿದವರ ಕೆಲವು ಅನಿಸಿಕೆಗಳು ಸಹ ಇವೆ:

ಕಾಂಗೋಬರಾಜವೇಲ್‌ನಿಂದ ನಮ್ಮ ಮುಬಲ್ಲಿಗ್ ಬರೆಯುತ್ತಾರೆ: ಒಬ್ಬ ಕ್ರೈಸ್ತ ಸ್ನೇಹಿತ ಮಿಸ್ಟರ್ ಕ್ರೈಸ್ಟ್ ಅವರನ್ನು ಜಲ್ಸ ನೋಡಲು ಆಮಂತ್ರಿಸಲಾಗಿತ್ತು. ಸಮಾರೋಪ ಭಾಷಣವನ್ನು ಆಲಿಸಿದ ನಂತರ ಅವರು ಹೇಳಿದರು: ಲೋಕದ ಪ್ರತಿಯೊಂದು ಆಡಳಿತ ಈ ಅಧ್ಯಾಪನೆಗಳನ್ನು ಪಾಲಿಸಿದರೆ ಲೋಕದಿಂದ ಬಡತನ ಪೂರ್ಣವಾಗಿ ಕೊನೆಗೊಳ್ಳದಿದ್ದರೂ ಕನಿಷ್ಠ ಪಕ್ಷ ಲೋಕದಲ್ಲಿ ಯಾವನೇ ವ್ಯಕ್ತಿಯೂ ರಾತ್ರಿ ಹಸಿವಿನಿಂದ ಮಲಗುವ ಸ್ಥಿತಿ ಬರದು. ಇಸ್ಲಾಮಿನ ಖಲೀಫರಿಗೆ ತನ್ನ ಪ್ರಜೆಗಳ ಬಗ್ಗೆ ಕಾಳಜಿ ಇದ್ದ ಹಾಗೆ ನಮ್ಮ ನಾಯಕರು ಸಹ ಹೀಗೆಯೇ ಕಾಳಜಿ ವಹಿಸಿದರೆ ನಮ್ಮ ಲೋಕ ಸ್ವರ್ಗವಾಗುವುದು. ಈ ಭಾಷಣವನ್ನು ಕೇಳಿದ ನಂತರ ನನ್ನ ಹೃದಯವು ತುಂಬಾ ಶಾಂತವಾಗಿದೆ. ನಮ್ಮ ಖಲೀಫರು ಇಸ್ಲಾಂ ಧರ್ಮದ ಬೋಧನೆಗಳನ್ನು ಪ್ರಸ್ತುತಪಡಿಸಿದ ರೀತಿ ಹೃದಯಕ್ಕೆ ಶಾಂತಿಯನ್ನು ನೀಡಿದೆ ಎಂದು ಹೇಳುತ್ತಾರೆ. ಮತ್ತೆ ಅವರು ಹೇಳಿದರು, ನಾನು ನಮ್ಮ ಖಲೀಫ ಎಂದು ಪದಗಳನ್ನು ಬಳಸಿದ್ದೇನೆ ಏಕೆಂದರೆ ಇಂದಿನಿಂದ ನಾನು ನಿಮ್ಮೊಂದಿಗೆ ಇದ್ದೇನೆ ಮತ್ತು ಅವರೂ ನನ್ನ ಖಲೀಫರು.

ಲಿಟೋವಿಯಾದಿಂದ ಜಲ್ಸ ಸಾಲನದಲ್ಲಿ ಭಾಗವಹಿಸಿದ ಓರ್ವ ಸಾಮಾಜಿಕ ಕಾರ್ಯಕರ್ತೆ ಎಗೀಜಾ ಉರ್ಘೀನ್ ಸಾಹಿಬ ಹೇಳುತ್ತಾರೆ: ನಾವು ಇಲ್ಲಿಗೆ ಬಂದ ನಂತರ ಅತ್ಯಂತ ಸುಂದರ ಮತ್ತು ಶಾಂತಿಯುತ ವಾತಾವರಣದಲ್ಲಿ ಬದುಕುತ್ತಿದ್ದೇವೆ. ಪ್ರತಿ ಮುಖವೂ ನಗುತ್ತಿರುವಂತೆ ತೋರುತ್ತದೆ. ಒಂದು ವಿಚಿತ್ರ ರೀತಿಯ ಶಾಂತ ವಾತಾವರಣವಿದೆ. ಮತ್ತೆ ನನ್ನ ಪರಿಸರಕ್ಕೆ ಹೋದಾಗ ಟೆನ್ಷನ್ ಆಗಿ ಜನ ಮುಗಿಲುಮುಟ್ಟುವ ಹಳೇ ಪರಿಸ್ಥಿತಿಯೇ ಆಗಿಬಿಡುತ್ತದೆ ಎಂಬ ಆತಂಕ ನನ್ನದು.

ಐಸ್‌ಲ್ಯಾಂಡ್‌ನ ಫ್ಯಾಮಿಲಿ ಫೆಡರೇಶನ್ ಫಾರ್ ವರ್ಲ್ಡ್ ಪೀಸ್ ಮಿಷನರಿ ಪಾಲ್ ಹರ್ಮನ್ ಹೇಳುತ್ತಾರೆ, ನನ್ನ ಜಲ್ಸ ಸಾಲಾನಕ್ಕೆ ಆಗಮಿಸಿದ ಅನುಭವವು ಪ್ರಾರಂಭದಿಂದ ಕೊನೆಯವರೆಗೆ ಅದ್ಭುತವಾಗಿದೆ. ನಾನು ಭೇಟಿಯಾದ ಎಲ್ಲಾ ಜಮಾಅತ್‌ನ ಜನರು ಸೌಮ್ಯ, ಸಜ್ಜನಿಕೆ, ಇತರರನ್ನು ಪರಿಗಣಿಸುವವರು, ಸೇವೆ ಮಾಡಲು ಯಾವಾಗಲೂ ಸಿದ್ಧರಾಗಿದ್ದರು. ವಸತಿ ವ್ಯವಸ್ಥೆಯು ತುಂಬಾ ಚೆನ್ನಾಗಿತ್ತು ಮತ್ತು ಇದೆಲ್ಲವೂ ಮೂರು ಸ್ಮರಣೀಯ ದಿನಗಳ ಪ್ರಮುಖ ಭಾಗವಾಗಿತ್ತು ಮತ್ತು ಹೆಚ್ಚಿನ ಸಂಖ್ಯೆಯ ಜನರನ್ನು ಪರಿಗಣಿಸಿ ವ್ಯವಸ್ಥೆಯು ತುಂಬಾ ಹೆಚ್ಚಿತ್ತು. ಮತ್ತು ಅವರು ಹೇಳುತ್ತಾರೆ: ನನ್ನ ಪ್ರಕಾರ ಕಾರ್ಮಿಕರು ಎಷ್ಟೇ ಒತ್ತಡ ಹೇರಿದರೂ ಗಾಬರಿಯಾಗುತ್ತಿರಲಿಲ್ಲ. ಮತ್ತು ಜಲ್ಸಾದಲ್ಲಿ ಭಾಗವಹಿಸುವವರ ಸಹಕಾರವೂ ಉತ್ತಮ ನಿರ್ವಹಣೆಯ ಭಾಗವಾಗಿತ್ತು ಎನ್ನುತ್ತಾರೆ. ಅವರು ಚೆನ್ನಾಗಿ ಸಿದ್ಧಪಡಿಸಿರುವುದು ಜನರ ಉನ್ನತ ನೈತಿಕತೆಯ ಪ್ರತಿಬಿಂಬವಾಗಿದೆ ಎಂದು ನಾನು ನಂಬುತ್ತೇನೆ. ಇಷ್ಟೇ ಅಲ್ಲದೆ ಈ ಜನರು ತಮ್ಮ ಶಿಕ್ಷಣವನ್ನು ಸಹ ಅಭ್ಯಾಸ ಮಾಡುತ್ತಿದ್ದಾರೆ. ಹೀಗೆ ಅತಿಥಿಗಳು ಮತ್ತು ಆತಿಥೇಯರ ಪ್ರಭಾವವು ಇತರರ ಮೇಲೆ ದೊಡ್ಡದಾಗಿದೆ. ಭಾಷಣಗಳ ಅನುವಾದದ ಕುರಿತು ಅವರು ಹೇಳುತ್ತಾರೆ: ಕೆಲವೊಮ್ಮೆ ಅನುವಾದವನ್ನು ಅರ್ಥಮಾಡಿಕೊಳ್ಳಲು ನನಗೆ ಕಷ್ಟವಾಗುತ್ತಿತ್ತು, ಆದರೆ ನಾನು ಏನು ಅರ್ಥಮಾಡಿಕೊಳ್ಳಬಲ್ಲೆನೋ ಅದನ್ನು ನಾನು ತುಂಬಾ ಆನಂದಿಸಿದೆ ಎಂದು ಹೇಳಿದರು.

ಹಾಲೆಂಡ್‌ನ ವಕೀಲರೊಬ್ಬರು ಸಹ ಅದೇ ರೀತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಂತರ ಪಿಯರೆ ಇಮ್ಯಾನುಯೆಲ್ ಹೈಟಿಯ ನ್ಯಾಯಾಂಗ ಪೊಲೀಸ್ ಪ್ರತಿನಿಧಿಯಾಗಿದ್ದಾರೆ. ಅವರು ಹೇಳುತ್ತಾರೆ: ಯುಕೆಯಲ್ಲಿ ಅಹ್ಮದೀಯ ಮುಸ್ಲಿಂ ಜಮಾಅತ್ ಇಂಟರ್‌ನ್ಯಾಶನಲ್‌ನ ಜಲ್ಸ ಸಆಲಾನಕ್ಕೆ ಹಾಜರಾಗುವ ಮೂಲಕ ಆ ಅತಿಥಿಗಳಲ್ಲಿ ಒಬ್ಬರಾಗಿ ಗೌರವಿಸಲಾಯಿತು. ಒಬ್ಬ ಕ್ರೈಸ್ತನಾಗಿ, ಈ ಜಲ್ಸಕ್ಕೆ ಸೇರುವ ಮೂಲಕ ನಾನು ಇಸ್ಲಾಂ ಧರ್ಮದ ಬಗ್ಗೆ ಮಾತ್ರವಲ್ಲದೆ ಧರ್ಮದ ಬಗ್ಗೆಯೂ ಸಾಕಷ್ಟು ಕಲಿಯುವ ಅವಕಾಶವನ್ನು ಪಡೆದುಕೊಂಡಿದ್ದೇನೆ. ವಿಭಿನ್ನ ನಂಬಿಕೆಗಳು, ಸಂಸ್ಕೃತಿ, ಭಾಷೆ ಮತ್ತು ವಿಭಿನ್ನ ಸಂಪ್ರದಾಯಗಳಿಗೆ ಸೇರಿದ ಜನರನ್ನು ಒಂದೇ ಬಣ್ಣದಲ್ಲಿ ಹೇಗೆ ಚಿತ್ರಿಸಲಾಗಿದೆ. ಇದು ಒಂದು ವಿಚಿತ್ರ ದೃಶ್ಯವಾಗಿತ್ತು, ಖಂಡಿತವಾಗಿಯೂ ಮೆಚ್ಚುಗೆ ಮತ್ತು ಅನುಕರಣೆಗೆ ಯೋಗ್ಯವಾಗಿದೆ.

ಅವರು ಃಏಳುತ್ತಾರೆ: ಸಭೆ ಸೇರಿದ ನಂತರ, ಅಹ್ಮದೀಯರ ಹೃದಯವು ಅವರ ಧರ್ಮದ ನಿಯಮಗಳು ಮತ್ತು ಕರ್ತವ್ಯಗಳ ಬಗ್ಗೆ ನಿಷ್ಠೆ ಮತ್ತು ಗೌರವವನ್ನು ಹೊಂದಿದ್ದಾರೆ, ಅವರ ಹೃದಯದಲ್ಲಿ ಬೂಟಾಟಿಕೆ ಇಲ್ಲವೇ? ಎಂದು ನಾನು ಬಹಳ ಯೋಚಿಸಿದೆ. ಕುತೂಹಲ ಹುಟ್ಟಿತು, ಆಗ ನನ್ನ ಹೃದಯವು ಅಹ್ಮದೀಯರಲ್ಲಿ ಸಹೋದರ ಸಾಮರಸ್ಯವು ಅವರ ಶಬ್ದಕೋಶದಿಂದ ಬೂಟಾಟಿಕೆ ಎಂಬ ಪದವನ್ನು ತೊಡೆದುಹಾಕುತ್ತದೆ ಎಂದು ತೋರುತ್ತದೆ. ಆದ್ದರಿಂದ ಈ ಅಭಿವ್ಯಕ್ತಿಗಳು ಪ್ರತಿಯೊಬ್ಬ ಅಹ್ಮದಿ ತನ್ನ ನಂಬಿಕೆಯನ್ನು ರಕ್ಷಿಸಲು ಇರಬೇಕು. ನಾನು ನನ್ನ ದೇಶಕ್ಕೆ ಹಿಂತಿರುಗಿದಾಗ, ಈ ಮೂರು ಮರೆಯಲಾಗದ ದಿನಗಳಲ್ಲಿ ನಾನು ಸ್ವೀಕರಿಸಿದ ಪ್ರೀತಿ, ಶಾಂತಿ, ಪರಸ್ಪರ ತಿಳುವಳಿಕೆ, ನಂಬಿಕೆ, ವಿಧೇಯತೆ ಮತ್ತು ಕರುಣೆಯ ಸಂದೇಶವನ್ನು ನನ್ನೊಂದಿಗೆ ತೆಗೆದುಕೊಳ್ಳುತ್ತೇನೆ ಎಂದು ಅವರು ಹೇಳುತ್ತಾರೆ.

ಮತ್ತೆ ಆಸ್ಟ್ರೇಲಿಯದ ನವ ಅಹ್ಮದಿ ಶ್ರೀ ಬಿಲಾಲ್ ಕುಡಾನ್ ಸಾಹಿಬ್ ಇದ್ದಾರೆ ಅವರು ಹೇಳುತ್ತಾರೆ. ಈ ಭಾವನೆಯು ನನ್ನಲ್ಲಿ ಸದಾ ಇರುತ್ತದೆ. ಇದು ಅದ್ಭುತ ದಿನಗಳಾಗಿತ್ತು ಮತ್ತು ಶಿಸ್ತು, ಪ್ರೀತಿ ಮತ್ತು ಸಹೋದರತ್ವದ ಪ್ರದರ್ಶನವನ್ನು ನಾನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಜಾಗತಿಕ ಬೈಅತ್‌ಗೆ ಸೇರುವುದು ನನಗೆ ಹೊಸ ಅನುಭವವಾಗಿದೆ ಎಂದು ಅವರು ಹೇಳುತ್ತಾರೆ. ಇದು ನನ್ನ ಆಧ್ಯಾತ್ಮಿಕತೆಯನ್ನು ಹೆಚ್ಚಿಸಿತು ಮತ್ತು ನನಗೆ ಸಮಾಧಾನವನ್ನು ನೀಡಿತು.

ಯೂನಸ್ ಸಾಹಿಬ್ ಮಯೊಟ್ಟೆ ದ್ವೀಪದಿಂದ ಸೇರಿದರು. ಅವರು ಹೇಳುತ್ತಾರೆ, ನಾನು ಮೊದಲ ಬಾರಿಗೆ ಜಲ್ಸದಲ್ಲಿ ಭಾಗವಹಿಸಿದಾಗ, ನನ್ನ ಹೃದಯವು ನನ್ನ ಮೇಲೆ ವಿಶೇಷ ಶಕ್ತಿ ಇಳಿದಂತೆ ಭಾಸವಾಯಿತು. ಜಲ್ಸದ ದೃಶ್ಯ ನೋಡಿ ಬೆರಗಾದೆ. ನಾನು ಜಲ್ಸದ ಬಗ್ಗೆ ನಾನು ಬಹಳಷ್ಟು ಕೇಳಿದ್ದೆ ಆದರೆ ಅದರಲ್ಲಿ ಸೇರುವುದು ಸಂಪೂರ್ಣವಾಗಿ ವಿಭಿನ್ನ ದೃಷ್ಟಿಕೋನವಾಗಿತ್ತು.

ಮತ್ತೆ ಜಲ್ಸದ ಆಯೋಜನೆಯನ್ನು ಆಲಿಸಿದ ನಂತರ ಬಹಳಷ್ಟು ಜನ ಬೈಅತ್ ಅನ್ನು ಸಹ ಮಾಡಿದರು.

ಗಿನಿಯಾ–ಬಿಸ್ಸಾವ್‌ನಲ್ಲಿ ಜಲ್ಸದ ಏರ್ಪಾಡುಗಳನ್ನು ನೋಡಿದ ನಂತರ ವ್ಯಕ್ತಿಯೊಬ್ಬರು ಬೈಅತ್ ಮಾಡಿದರು. ತಾಂಜಾನಿಯಾದಿಂದ ಅಮೀರ್ ಸಾಹಿಬ್ ಬರೆಯುತ್ತಾರೆ: ಅಲ್ಲಿಯೂ ಎಂಟಿಎ ಮುಖಾಂತರ ಭಾಗವಹಿಸಿ ಬೈಅತ್ ಮಾಡಿದರು. ಮೂಸಾ ಸಾಹಿಬ್ ಅವರು 1970 ರಲ್ಲಿ ಅಹ್ಮದಿಯೇತರ ಮಹಿಳೆಯನ್ನು ವಿವಾಹವಾದರು ಮತ್ತು ಅವರ ಪತ್ನಿಯನ್ನು ಇಸ್ಲಾಮ್ ಅಹ್ಮದಿಯತ್ ಅನ್ನು ಸ್ವೀಕರಿಸಬೇಕೆಂದು ಅವರು ಪ್ರಯತ್ನಿಸುತ್ತಿದ್ದರು ಮತ್ತು ಪ್ರಾರ್ಥಿಸುತ್ತಿದ್ದರು. ಆದರೆ ಆ ಮಹಿಳೆ ಸ್ವೀಕರಿಸುತ್ತಿರಲಿಲ್ಲ. ಈ ವರ್ಷದ ಜಲ್ಸದಲ್ಲಿ, ಅವರ ಕುಟುಂಬವು ಎಂ.ಟಿ.ಎ ನಲ್ಲಿ ಜಲ್ಸವನ್ನು ವೀಕ್ಷಿಸುತ್ತಿದ್ದರು. ಅವರ ಪತ್ನಿಯೂ ನೋಡುವುದರಲ್ಲಿ ಸೇರಿಕೊಂಡಳು, ಜಾಗತಿಕ ಬೈಅತ್‌ನಲ್ಲಿ ಸೇರಿಕೊಂಡಳು. ಜಾಗತಿಕ ಬೈಅತ್ ನಂತರ ಅವರು ಹೇಳಿದರು: ಈ ಸಭೆ ನನ್ನ ಮೇಲೆ ವಿಶೇಷ ಪರಿಣಾಮ ಬೀರಿದೆ ಮತ್ತು ಖಲೀಫತುಲ್ ಮಸೀಹ್ ಅವರ ಭಾಷಣಗಳು ನನ್ನಲ್ಲಿ ವಿಚಿತ್ರವಾದ ಬದಲಾವಣೆಯನ್ನು ಸೃಷ್ಟಿಸಿವೆ. ಈಗ ನಾನು ಅಹ್ಮದಿಯಾಗಿ ಸೇರುತ್ತೇನೆ ಎಂದು ನಾನು ಜಾಗತಿಕ ಬೈಅತ್ ಅನ್ನು ತೆಗೆದುಕೊಳ್ಳುವ ಮೊದಲು ನಿರ್ಧರಿಸಿದ್ದೆ, ಹೀಗೆ ಜಲ್ಸಾದ ಅನುಗ್ರಹದಿಂದ ಅವರ ಪತ್ನಿಯೂ ಅಹ್ಮದಿಯತ್‌ನಲ್ಲಿ ಸೇರಿಕೊಂಡರು. ಜಲ್ಸಾದ ನಂತರ ಸಿಕ್ಕಿದ ಇಂತಹ ಹಲವು ಘಟನೆಗಳು ನಡೆಯುತ್ತಲೇ ಇರುತ್ತವೆ. ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿದ ಬಳಿಕ ಬೈಅತ್ ಮಾಡಿದ ಬಹಳಷ್ಟು ಜನರಿದ್ದಾರೆ.

ಈ ರೀತಿಯಾಗಿ ಅಲ್ಲಾಹನ ಅನುಗ್ರಹದಿಂದ ಅನೇಕ ಘಟನೆಗಳು, ಅಭಿಪ್ರಾಯಗಳು ಮತ್ತು ಅನಿಸಿಕೆಗಳು ಲಭಿಸಿವೆ. ಅಹ್ಮದಿಯರ ಜೀವಿತಗಳನ್ನು ಸದಾ ಕಾಲಕ್ಕೂ ಅಲ್ಲಾಹನೊಂದಿಗೆ ಜೋಡಿಸುವಂತಹ ಫಲಿತಾಂಶಗಳು ಈ ಜಲ್ಸದಿಂದ ಉಂಟಾಗುವಂತೆ ಅಲ್ಲಾಹನು ಮಾಡಲಿ. ನಂಬಿಕೆ ಮತ್ತು ದೃಢವಿಶ್ವಾಸದಲ್ಲಿ ವರ್ಧನೆ ಉಂಟಾಗಲಿ. ಹಝ್ರತ್ ಮಸೀಹ್

ಮೌಊದ್(ಅ)ರ ಆಗಮನದ ಉದ್ದೇಶವನ್ನು ಈಡೇರಿಸುವಂತಾಗಲಿ. ಅದೇ ರೀತಿಯಲ್ಲಿ ಅನ್ಯರಲ್ಲೂ ಕೇವಲ ತಾತ್ಕಾಲಿಕವಲ್ಲದ, ಬದಲಾಗಿ ಸ್ಥಾಯಿಯಾಗಿ ಅವರ ಕಣ್ಣುಗಳನ್ನು ತೆರೆಸುವಂತಹ ಪ್ರಭಾವಗಳು ಉಂಟಾಗಲಿ.

ಮಾಧ್ಯಮಗಳ ಮೂಲಕವೂ ಜಲ್ಸದ ಕಾರ್ಯಕ್ರಮಗಳನ್ನು ನೋಡಲೂ ಆಲಿಸಲೂ ಆಯಿತು. ಆಫ್ರಿಕದಲ್ಲಿ 24 ಟಿ.ವಿ. ಚಾನೆಲ್‌ಗಳು ನನ್ನ ಪೂರ್ತಿ ಭಾಷಣಗಳನ್ನು ಪ್ರಸಾರ ಮಾಡಿದುವು. ಈ ರೀತಿಯಾಗಿ 40 ಮಿಲಿಯನ್‌ಗಿಂತ ಹೆಚ್ಚಿನ ಜನರು ಈ ಭಾಷಣಗಳನ್ನು ಆಲಿಸಿದರು. ಪತ್ರಿಕೆಗಾರರಿಗಾಗಿ ಮೀಡಿಯಾ ಸೆಂಟರನ್ನು ನಿರ್ಮಿಸಲಾಗಿತ್ತು. ಅಲ್ಲಿ 23 ಮಾಧ್ಯಮ ಪ್ರತಿನಿಧಿಗಳು ಮತ್ತು ಪತ್ರಿಕೆಗಾರರು ಜಲ್ಸ ಆಲಿಸಿದರು. ಈ ರೀತಿಯಾಗಿ ಅವರು ದಿನಾಲೂ ವರದಿಗಳನ್ನು ತಯಾರು ಮಾಡುತ್ತಿದ್ದರು. ಒಟ್ಟಾಗಿ 72 ಮೀಡಿಯಾ ರಿಪೋರ್ಟ್‌ಗಳನ್ನು ತಯಾರಿ ಮಾಡಲಾಯಿತು. ಅವುಗಳು 50 ಮಿಲಿಯನ್ ಜನರಿಗೆ ತಲುಪಿದುವು.

41 ವೆಬ್‌ಸೈಟ್‌ಗಳಲ್ಲಿ ವಾರ್ತೆಗಳು ಪ್ರಸಾರಗೊಂಡುವು. ಜಲ್ಸದ ಕುರಿತು 15 ಲೇಖನಗಳು ವಾರ್ತಾಪತ್ರಿಕೆಗಳಲ್ಲಿ ಪ್ರಕಟಗೊಂಡುವು. ವಿವಿಧ ಟಿ.ವಿ. ಚಾನೇಲ್‌ಗಳಲ್ಲಿ 14 ವಾರ್ತೆಗಳು ಪ್ರಸಾರಗೊಂಡುವು. ರೇಡಿಯೋ ಸ್ಟೇಶನಿನಲ್ಲಿ 37 ವಾರ್ತೆಗಳು ಪ್ರಸಾರಗೊಂಡುವು.

ಬಿ.ಬಿ.ಸಿ. ಸಮೇತ ಅನೇಕ ಟಿ.ವಿ. ಚಾನೆಲ್‌ಗಳಲ್ಲಿ ಜಲ್ಸದ ವಾರ್ತೆ ಪ್ರಸಾರಗೊಂಡಿವೆ. ಹೇಗಿದ್ದರೂ ಅಲ್ಲಾಹನ ಅನುಗ್ರಹದಿಂದ ಜಲ್ಸದ ವಾರ್ತೆಗಳು ತಲುಪಿವೆ. ಜಮಾಅತಿನ ಮತ್ತು ಇಸ್ಲಾಮಿನ ಪರಿಚಯ ಉಂಟಾಗಿದೆ.

ಒಟ್ಟಿನಲ್ಲಿ ಅಲ್ಲಾಹನು ಎಲ್ಲ ರೀತಿಯಲ್ಲೂ ಈ ಜಲ್ಸವನ್ನು ಅನುಗ್ರಹೀತಗೊಳಿಸಿದನು. ಅಲ್ಲಾಹನು ಸದಾ ನಮ್ಮನ್ನು ವಿನಯವಂತ ಮತ್ತು ಕೃತಜ್ಞತೆಯುಳ್ಳ ದಾಸರನ್ನಾಗಿ ಮಾಡಿಕೊಂಡು ನಮ್ಮ ಸ್ವಂತ ಸುಧಾರಣೆ ಮಾಡುವವರನ್ನಾಗಿ ಮಾಡಲಿ. ಆಮೀನ್.

...*...*...*...

*(ಪುಟ ಸಂಖ್ಯೆ* **01**ರ *ಉಳಿದ ಭಾಗ)*

ಮರೆತುಬಿಡಬೇಕು ಎಂದು ಸಹ ಹೇಳುವುದಿಲ್ಲ, ಯಾರಾದರೂ ಹೀಗೆ ಮಾಡಿದರೆ ಅವನು ದೇವಸ್ಮರಣೆಯಿಂದ ವಂಚಿತನಾಗುತ್ತಾನೆ, ಅವನ ನಾಲಿಗೆಯ ಮೇಲೆ ವಾದ ಮಾತ್ರ ಉಳಿದಿರುತ್ತದೆ. ಒಟ್ಟಿನಲ್ಲಿ ಜೀವಂತರ ಸಹವಾಸದಲ್ಲಿರಿ, ಆಗ ಮಾತ್ರ ನಿಮಗೆ ಜೀವಂತ ಪ್ರಭುವಿನ ದೃಶ್ಯ ಕಾಣಲು ಸಾಧ್ಯವಾಗುವುದು. **(ಮಲ್ಫೂಝಾತ್, ಸಂಪುಟ–1, ಪುಟ–478, ಮುದ್ರಣ 2018 ಖಾದಿಯಾನ)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್(ಅ)ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್(ಅತಬಿಅ)ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತವೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ. **(ಸಂಪಾದಕರು)**

*(ಪುಟ ಸಂಖ್ಯೆ* **12**ರ *ಉಳಿದ ಭಾಗ)*

ಇಂದಿನ ಆಧುನಿಕ ಯುಗದಲ್ಲಿ ಭೌಗೋಳಿಕ ವಿವಾದಗಳು ದಿನೇ ದಿನೇ ಲೋಕವನ್ನು ವಿನಾಶದ ಅಂಚಿಗೆ ತರುತ್ತಿದೆ. ಹಝ್ರತ್ ಮಸೀಹ್ ಮೌಊದ್ (ಅ) ಹೇಳಿದರು. ಆಧುನಿಕ ಯುಗದಲ್ಲಿ ಎಲ್ಲ ರೀತಿಯ ಧಾರ್ಮಿಕ ಯುದ್ಧಗಳು ನಿಷಿದ್ಧವಿದೆ. ಆದುದರಿಂದ ಮುಸ್ಲಿಮರು ಅಥವಾ ಯಾವುದೆ ಧರ್ಮದ ಜನರು ಧರ್ಮದ ಹೆಸರಿನಲ್ಲಿ ಯುದ್ಧಗಳನ್ನು ನಡೆಸುವುದು ಧರ್ಮಸಮ್ಮತವಲ್ಲ ಅದರಿಂದ ಸ್ಪಷ್ಟವಾಗುವುದೇನೆಂದರೆ. ಅಹ್ಮದಿಯಾ ಮುಸ್ಲಿಂ ಜಮಾಅತಿನ ಉದ್ದೇಶ ಪ್ರದೇಶ, ದೇಶಗಳನ್ನು ಅಥವಾ ನಗರಗಳನ್ನು ವಶಪಡಿಸಿಕೊಳ್ಳುವುದಲ್ಲ. ಅಥವಾ ಸಮುದಾಯಗಳನ್ನು ಅಳಿಸಿ ಹಾಕುವುದು ಅಲ್ಲ. ನಮ್ಮ ಸಂದೇಶವನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ವೀಕರಿಸಿದ ದೇಶಗಳಲ್ಲಿ ಯಾರು ರಾಜಕೀಯ ಅಧಿಕಾರ ಅಥವಾ ಲೌಕಿಕ ಪ್ರಭಾವವನ್ನು ಬಯಸಲಿಲ್ಲ. ಇತಿಹಾಸ ಈ ವಾಸ್ತವಕ್ಕೆ ಸಾಕ್ಷಿಯಾಗಿದೆ.

ಹುಝೂರೆ ಅನ್ವರ್ ಹೇಳಿದರು. ಎಲ್ಲಿಯವರೆಗೆ ಧಾರ್ಮಿಕ ಸ್ವಾತಂತ್ರ್ಯ ಮತ್ತು ಮನಸಾಕ್ಷಿಯ ಪ್ರಶ್ನೆಯಿದೆ ನಾವು ದೃಢವಾಗಿ ನಂಬಿದ್ದೆವೆ. ಧರ್ಮ ಮತ್ತು ವಿಶ್ವಾಸ ಪ್ರತಿಯೊಬ್ಬರ ವೈಯಕ್ತಿಕ ಸಮಸ್ಯೆಯಾಗಿದೆ. ಮತ್ತು ಪ್ರತಿಯೊಬ್ಬರಿಗೆ ತಮ್ಮ ಮಾರ್ಗ ಅನುಸರಿಸುವ ಹಕ್ಕಿದೆ. ಇದೇನು ನಮ್ಮ ಹೊಸದಾದ ನಿಲುವಲ್ಲ ಅದನ್ನು ನಾವು ಸ್ವೀಕರಿಸಿದ್ದೇವೆ ಎನ್ನುವ ಬದಲು ನಮ್ಮ ನಮ್ಮ ಈ ನಿಲುವಿನ ಬೇರು ಪವಿತ್ರ ಖುರ್‌ಆನ್‌ನ ಬೋಧನೆಗಳಾಗಿವೆ. ನಿಮಗೆ ತಿಳಿದಿರಬೇಕು. ಇತ್ತೀಚೆಗೆ ಗ್ರೇಟ್ ಬ್ರಿಟನ್‌ನ ರಾಣಿ ಎಲಿಜಬೆತ್ ನಿಧನರಾದರು ಮತ್ತು ಅವರ ಮಗ ಚಾರ್ಲಿಸ್ ರಾಜರಾಗಿದ್ದಾರೆ. ಯು.ಕೆ.ಯಲ್ಲಿ ರಾಜನ ಅಧಿಕೃತ ಶೀರ್ಷಿಕೆಗಳಲ್ಲಿ ಡಿಫೆಂಡರ್ ಆಫ್ ದಿ ಫೇತ್ ಸೇರಿದೆ. ಅನೇಕ ಸಂದರ್ಭಗಳಲ್ಲಿ, ರಾಜಾ ಚಾರ್ಲ್ಸ್ ಎಲಾ ಧರ್ಮಗಳ ಬಗ್ಗೆ ಗೌರವವನ್ನು ವ್ಯಕ್ತಪಡಿಸಿದ್ದಾರೆ. ಅವರು ನಂಬಿಕೆಯ ರಕ್ಷಕ ಬದಲಿಗೆ ಎಲ್ಲಾ ಧರ್ಮಗಳ ರಕ್ಷಕ ಎಂದು ಗುರುತಿಸಬೇಕೆಂದು ಬಯಸಿದರು. ಇದು ನಿಸ್ಸಂದೇಹವಾಗಿ ಶ್ಲಾಘನೀಯ ಹೇಳಿಕೆಯಾಗಿದೆ ಮತ್ತು ಅದು ಕಿಂಗ್ ಚಾರ್ಲ್ಸ್ ಅವರ ವಿಶಾಲ ಹೃದಯ ಮತ್ತು ಒಲಗೊಳ್ಳುವಿಕೆಯನ್ನು ಪ್ರತಿಬಿಂಬಿಸುತ್ತದೆ. ಅದಾಗ್ಯೂ ಅವರ ಪ್ರದೇಶದ ನಂತರ, ಕೆಲವು ವ್ಯಾಖ್ಯಾನಾಕಾರರು ಶೀರ್ಷಿಕೆಯಲ್ಲಿ ಅಂತಹ ಬದಲಾವಣೆಯನ್ನು ಕ್ರಿಶ್ಚಿಯನ್ ಸಮುದಾಯವು ಸಾರ್ವತ್ರಿಕವಾಗಿ ಮೆಚ್ಚುವುದಿಲ್ಲ ಅಥವಾ ಕೆಲವು ಕ್ರೈಸ್ತರಲಲ್ಲದವರಿಂದ ಇಷ್ಟಪಡುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಎಲ್ಲಾ ಧರ್ಮಗಳನ್ನು ರಕ್ಷಿಸುವ ರಾಜನ ಬಯಕೆಯು ನಿಷ್ಪಪಟವಾಗಿ ಪರಿಣಮಿಸಬಹುದು ಎಂಬ ಶೀರ್ಷಿಕೆಯು ಈ ಉಲ್ಲೇಖದಿಂದ ಹೊರಬಂದಿದೆ.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಧಾರ್ಮಿಕ ಸಾಮರಸ್ಯವನ್ನು ಬಲಪಡಿಸುವ ಈ ಪ್ರಯತ್ನಗಳು ವ್ಯರ್ಥವಾಗುತ್ತವೆ ಎಂದು ಕೆಲವರು ಭಾವಿಸಿದರೆ, ನನ್ನ ದೃಷ್ಟಿಯಲ್ಲಿ, ಎಲ್ಲಾ ಧರ್ಮಗಳ ರಕ್ಷಣೆ ಮತ್ತು ನಿಜವಾದ ಧಾರ್ಮಿಕ ಸ್ವಾತಂತ್ರ್ಯದ ಸ್ಥಾಪನೆಯು ಮುಖ್ಯ ಸಾಧನೆಯಾಗಿದೆ. ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸುವುದು ಆಧಾರವಾಗಿದೆ. ಈ ನಿಟ್ಟಿನಲ್ಲಿ ವಿಶ್ವಾದ್ಯಂತ ಧಾರ್ಮಿಕ ಸ್ವಾತಂತ್ರ್ಯವನ್ನು ಉತ್ತೇಜಿಸಲು ಪ್ರತಿವರ್ಷ ಅಂತರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸುವ ರಾಜ್ಯ ಇಲಾಖೆಯ ಅಡಿಯಲ್ಲಿ ಅಂತರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯದ ಕಚೇರಿಯನ್ನು ಸ್ಥಾಪಿಸಲು ಯು.ಎಸ್. ಸರಕಾರದ ಉಪಕ್ರಮವನ್ನು ನಾನು ಪ್ರಶಂಸಿಸುತ್ತೇನೆ.

ಹುಝೂರೆ ಅನ್ವರ್(ಅಬಿಅ) ನುಡಿದರು. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸುವ ನೆಲೆಯಲ್ಲಿ ಪವಿತ್ರ ಖುರ್‌ಆನ್‌ನ ವಚನ 40 ಮತ್ತು 41 ಅಂತರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸ್ಥಾಪಿಸಬಯಸುವ ಮಹೊನ್ನತ ಮತ್ತು ಮೂಲಮಂತ್ರವನ್ನು ವಿವರಿಸಲಾಗಿದೆ. ಈ ವಚನಗಳಲ್ಲಿ ಅಲ್ಲಾಹನು ಹೇಳುವನು. ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.

"ಅಲ್ಲಾಹನೇ ನಮ್ಮ ಪ್ರಭು ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು.

ಮತ್ತೆ ಅಲ್ಲಾಹನು ಹೇಳಿದನು. ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳನ್ನು ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸೀದಿಗಳು ನಿರ್ನಾಮವಾಗುತ್ತಿದ್ದವು. ಅವುಗಳಲ್ಲಿ ಅಲ್ಲಾಹನ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವ ಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ.

**(ಮುಂದುವರಿಯುವುದು)**

## ತಫ್ಸೀರೆ ಕಬೀರ್

**ಇದು ಪವಿತ್ರ ಖುರ್‌ಆನ್‌ನ ಮಹತ್ತರವಾದ ಶ್ರೇಷ್ಠತೆಯಾಗಿದೆ, ಅದು ಪಾಪದಿಂದ ತಡೆಯುವುದು ಮಾತ್ರವಲ್ಲದೆ ಪಾಪದಿಂದ ನಿಲ್ಲುವ ಮಾರ್ಗವನ್ನು ಸಹ ತೋರಿಸುತ್ತದೆ.**
**ಪಾಪವನ್ನು ತಪ್ಪಿಸುವ ಮಾರ್ಗವನ್ನು ಹೇಳದ ಪುಸ್ತಕವು ವ್ಯಕ್ತಿಯನ್ನು ತೊಂದರೆಗೆ ಸಿಲುಕಿಸುತ್ತದೆ**
**ಯಾವುದನ್ನಾದರೂ ನಿಷೇಧಿಸುವ ಮತ್ತು ಅದನ್ನು ತಪ್ಪಿಸುವ ಮಾರ್ಗಗಳನ್ನು ಹೇಳುವ ಪುಸ್ತಕದಿಂದ ಮಾತ್ರ ತೃಪ್ತಿಯನ್ನು ರಚಿಸಬಹುದು**

ಹಝ್ರತ್ ಮುಸ್ಲೆಹ್ ಮೌಊದ್(ರ) ಸೂರಾ ಬನಿ ಇಸ್ರಾಈಲ್‌ನ ಆಯತ್ 33 **ವಲಾ ತಖ್ರಬುಝ್ಝಿನಾ ಇನ್ನಹೂ ಕಾನ ಫಾಹಿಶತನ್, ವಸಾಅ ಸಬೀಲ** ನ ವ್ಯಾಖ್ಯಾನದಲ್ಲಿ ಹೀಗೆ ಹೇಳುತ್ತಾರೆ:

ಈ ಆಯತ್‌ನಲ್ಲಿ ವ್ಯಭಿಚಾರದಿಂದ ತಪ್ಪಿಸಿಕೊಳ್ಳುವ ಆಜ್ಞೆಯನ್ನು ಮಕ್ಕಳನ್ನು ಕೊಲ್ಲುವ ಪ್ರಸ್ತಾಪದ ನಂತರ ನೀಡಲಾಗಿದೆ. ವ್ಯಭಿಚಾರವು ಮಕ್ಕಳನ್ನು ಕೊಲ್ಲುವುದನ್ನು ಒಳಗೊಂಡಿರುತ್ತದೆ ಎಂಬ ಸೂಕ್ಷ್ಮ ಸುಳಿವು ಇದರಲ್ಲಿದೆ ಏಕೆಂದರೆ ಮೊದಲನೆಯದಾಗಿ ನಿಷೇಧಿತ ಮಕ್ಕಳನ್ನು ಸಾಮಾನ್ಯವಾಗಿ ನಾಶಮಾಡಲು ಪ್ರಯತ್ನಿಸಲಾಗುತ್ತದೆ. ಎರಡನೇಯದಾಗಿ ಅದು ನಾಶವಾಗದಿದ್ದರೂ ಸಹ, ನಂತರ ಮನುಷ್ಯನು ಅದರ ತರಬೇತಿ ಮತ್ತು ಪಾಲನೆಯಲ್ಲಿ ಸ್ಪಷ್ಟವಾಗಿ ಭಾಗವಹಿಸಲು ಸಾಧ್ಯವಿಲ್ಲ ಹೀಗೆ ಆ ಮಗು ಸಾಮಾನ್ಯವಾಗಿ ಪೋಷಕರಿಲ್ಲದೆ ನಾಶವಾಗುತ್ತದೆ.

**ಲಾತಖ್ರಬುಝ್ಝಿನಾ** ಎಂಬ ಪದಗಳನ್ನು ಬಳಸುವ ಮೂಲಕ, ವ್ಯಭಿಚಾರಕ್ಕೆ ಯಾವುದೇ ಅವಕಾಶವನ್ನು ನೀಡಬೇಡಿ. ಅಂದರೆ ಅನುಮತಿಸದ ಮಹಿಳೆಯರನ್ನು ಪ್ರತ್ಯೇಕವಾಗಿ ಭೇಟಿ ಮಾಡಬೇಡಿ ಎಂದು ಸೂಚಿಸಲಾಗಿದೆ. ಅವರೊಂದಿಗೆ ಹೆಚ್ಚು ಒಡನಾಟವನ್ನು ಇಟ್ಟುಕೊಳ್ಳಬೇಡಿ ಇತ್ಯಾದಿ. ಇದು ಪವಿತ್ರ ಖುರ್‌ಆನ್‌ನ ಮಹತ್ತರವಾದ ವೈಶಿಷ್ಟತೆಯಾಗಿದೆ, ಅಂದರೆ ಅದು ಪಾಪದಿಂದ ತಡೆಯುವುದು ಮಾತ್ರವಲ್ಲದೆ ಪಾಪದಿಂದ ತಡೆಯುವ ಮಾರ್ಗವನ್ನು ಸಹ ಹೇಳುತ್ತದೆ ಮತ್ತು ಅಂತಹ ಬೋಧನೆಯು ಮಾತ್ರ ಮನುಕುಲವನ್ನು ರಕ್ಷಿಸುತ್ತದೆ. ಪಾಪವನ್ನು ತಪ್ಪಿಸುವ ಮಾರ್ಗವನ್ನು ಹೇಳದ ಪುಸ್ತಕವು ವ್ಯಕ್ತಿಯನ್ನು ತೊಂದರೆಗೆ ಸಿಲುಕಿಸುತ್ತದೆ. ಯಾವ ಗ್ರಂಥವು ಯಾವ ವಿಷಯಗಳನ್ನು ನಿಷೇಧಿಸುತ್ತದೆಯೊ ಅದರಿಂದ ತಪ್ಪಿಸಿಕೊಳ್ಳುವ ಮಾರ್ಗಗಳನ್ನು ಸಹ ಹೇಳುವ ಗ್ರಂಥವು ತೃಪ್ತಿ ನೀಡುತ್ತದೆ. ಇದರಿಂದ ಒಬ್ಬ ವ್ಯಕ್ತಿಯು ನಾನು ಈ ಆದೇಶವನ್ನು ಅನುಸರಿಸಲು ಸಾಧ್ಯವಾಗುತ್ತದೆ ಎಂದು ತೃಪ್ತಿಪಡಬಹುದು. ನೀವು ಮಹಿಳೆಯನ್ನು ಕೆಟ್ಟ ದೃಷ್ಟಿಯಿಂದ ನೋಡಬಾರದು ಎಂದು ಬೈಬಲ್ ಹೇಳುತ್ತದೆ, ಆದರೆ ನೀವು ಯಾವುದೇ ಅನುಮತಿಸಲಾಗದ ಮಹಿಳೆಯನ್ನು ನೋಡಬಾರದು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ, ಏಕೆಂದರೆ ಮನುಷ್ಯನ ಮನಸ್ಸಿನಲ್ಲಿ ಆ ಆಕರ್ಷಣೆಯು ಕಾಮವನ್ನು ಉಂಟುಮಾಡುತ್ತದೆ. ಹೀಗೆ ಅದಕ್ಕೆ ಮಾರ್ಗ ತೆರೆದಾಗ ರಕ್ಷಣೆಯು ಅಸಾಧ್ಯವಾಗದಿದ್ದರೂ ಕಷ್ಟ ಹೌದು. ಈ ಬುದ್ಧಿವಂತಿಕೆಯ ಅಡಿಯಲ್ಲಿ, ನೀವು ಪಾಪದ ಸ್ಥಳದಿಂದ ಎಷ್ಟು ದೂರದಲ್ಲಿ ನಿಲ್ಲಬೇಕು ಅಂದರೆ ಅಲ್ಲಿ ನಿಂತು ನೀವು ಕೆಟ್ಟದ್ದರ ವಿರುದ್ಧ ಹೋರಾಡಬಹುದು ಎಂದು ಈ ಸ್ಥಳದಲ್ಲಿ ಹೇಳಲಾಗಿದೆ. ಕೆಲವರು ಇದು ಹೇಡಿತನ ಎಂದು ಹೇಳಿದ್ದಾರೆ, ಆದರೆ ಇದು ಹೇಡಿತನವಲ್ಲ, ಇದು ಎಚ್ಚರಿಕೆ, ಮತ್ತು ಯಾವುದೇ ಬುದ್ಧಿವಂತನಾದ ವ್ಯಕ್ತಿಯು ಎಚ್ಚರಿಕೆಯನ್ನು ಹೇಡಿತನ ಎಂದು ಕರೆಯುವುದಿಲ್ಲ.

ಮನುಷ್ಯರು ಎರಡು ವಿಧವಾಗಿರಬಹುದು ಎಂಬುದು ಸ್ಪಷ್ಟವಾಗಿದೆ. ಮೊದಲನೆಯವರು ಎಂತಹವರೆಂದರೆ ಪಾಪದ ಸಮೀಪ ಹೋದರೂ ಅದರಿಂದ ಉಳಿದಿರುತ್ತಾರೆ. ಅಂತಹ ವ್ಯಕ್ತಿಯನ್ನು ಆ ಸ್ಥಳದಿಂದ ದೂರವಿರಲು ಏಕೆ ಹೇಳಲಾಗಿದೆ ಅಂದರೆ ಇಂತಹ ಜನರು ಅದರಿಂದ ದೂರವಿರುತ್ತಾರೆ ಆದರೆ ಇತರ ಜನರು ಸಹ ಅವರನ್ನು ನೋಡಿ ಈ ಹಂತಕ್ಕೆ ಹೋಗಬಹುದು ಮತ್ತು ಅವರ ದೌರ್ಬಲ್ಯದಿಂದ ಪಾಪದಲ್ಲಿ ಒಳಗಾಗುವ ಸಾಧ್ಯತೆಯಿದೆ. ಹಾಗಾಗಿ ಅಂತಹ ವ್ಯಕ್ತಿ ಜನರಿಗೆ ಅಡ್ಡಿಯಾಗಬಾರದು.

ಎರಡನೆಯ ವಿಧದ ಜನರು ಅವರಿಗೆ ಅವಕಾಶ ಬಂದಾಗ ಪಾಪವನ್ನು ತಪ್ಪಿಸಲು ಸಾಧ್ಯವಿಲ್ಲ. ಅವರಿಗೆ ಅದರ ಸಮೀಪ ಹೋಗಲು ಬಿಡದ ಬುದ್ಧಿವಂತಿಕೆಯು ಸ್ಪಷ್ಟವಾಗಿದೆ. ಆದ್ದರಿಂದ, ಒಬ್ಬ ವ್ಯಕ್ತಿಯು ಪಾಪಕ್ಕೆ ಹತ್ತಿರವಾಗುವುದರಿಂದ ರಕ್ಷಿಸಬಹುದೇ ಅಥವಾ ಇಲ್ಲವೇ, ಎರಡೂ ಸಂದರ್ಭಗಳಲ್ಲಿ, ಅವನು ಪಾಪದ ಹತ್ತಿರವೂ ಬರಬಾರದು.

ಯಾವುದೇ ನಿರ್ದಿಷ್ಟ ಪ್ರಯೋಜನವಿರುವ ಕಡೆ ಹೋಗುವುದರಿಂದ ತಡೆದು ನಿಲ್ಲುವುದು ಹೇಡಿತನ ಎನ್ನಬಹುದು, ಆದರೆ ಯಾವುದೇ ನಿರ್ದಿಷ್ಟ ಪ್ರಯೋಜನವಿಲ್ಲದ ಸ್ಥಳದಿಂದ ದೂರವಿರುವುದನ್ನು ಹೇಡಿತನ ಎಂದು ಕರೆಯಲಾಗುವುದಿಲ್ಲ ಎಂಬುದನ್ನು ಸಹ ನೆನಪಿನಲ್ಲಿಡಬೇಕು.

**ಸಾಅ ಸಬೀಲ–** ಈ ಮಾತುಗಳ ಮೂಲಕ, ವ್ಯಭಿಚಾರದಲ್ಲಿ ನೈತಿಕ ಪಾಪವಲ್ಲದೆ ಇನ್ನೂ ಅನೇಕ ಅನಾನುಕೂಲತೆಗಳಿವೆ ಎಂದು ಸೂಚಿಸಲಾಗಿದೆ. ಯಾವ ವ್ಯಕ್ತಿಯು ಮದುವೆಯಾಗುತ್ತಾನೊ ಆತನು ಇಂತಹ ವಿಷಯಗಳನ್ನು ಅವಶ್ಯಕವಾಗಿ ಯೋಚಿಸುತ್ತಾನೆ ಅಂದರೆ ಮದುವೆಯಾಗುವ ವ್ಯಕ್ತಿಯು ಉತ್ತಮ ಆರೋಗ್ಯ ಹೊಂದಿರುವ ಹುಡುಗಿಯನ್ನು ಮದುವೆಯಾಗಲು ಕಾಳಜಿ ವಹಿಸುತ್ತಾನೆ. ಅವಳಿಗೆ ಯಾವುದೇ ಸಾಂಕ್ರಾಮಿಕ ರೋಗ ಇರಬಾರದು. ಒಳ್ಳೆಯ ಅಭ್ಯಾಸ ಮತ್ತು ನಡವಳಿಕೆಯನ್ನು ಹೊಂದಿರಬೇಕು. ಅಂತೆಯೇ ಹುಡುಗಿಯ ಸಂಬಂಧಿಕರು ಹುಡುಗನ ಆಲೋಚನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. ಆದರೆ ವ್ಯಭಿಚಾರದಲ್ಲಿ ಈ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲಾಗುವುದಿಲ್ಲ ಏಕೆಂದರೆ ವ್ಯಭಿಚಾರವು ಸಂಭವಿಸಿದಾಗ, ಅದು ಲೈಂಗಿಕ ಭಾವನೆಗಳ ಉತ್ಸಾಹದ ರೂಪದಲ್ಲಿರುತ್ತದೆ ಮತ್ತು ಆ ಸಮಯದಲ್ಲಿ ವ್ಯಕ್ತಿಯು ಯಾವುದೇ ರೀತಿಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲ, ಇದು ಅನೇಕ ರೀತಿಯ ರೋಗಗಳು ಅಥವಾ ಆರ್ಥಿಕ ನಾಶಕ್ಕೆ ಕಾರಣವಾಗುತ್ತದೆ. ಹಾಗಾಗಿ ಲೈಂಗಿಕ ಬಯಕೆಗಳನ್ನು ಪೂರೈಸುವ ಈ ವಿಧಾನವು ತುಂಬಾ ಅಪಾಯಕಾರಿ ಎಂದು ಅವರು ಹೇಳಿದರು.

ದೈನಂದಿನ ಅನುಭವದಲ್ಲಿ ಬರುವ ವಿಷಯವೇನೆಂದರೆ ಗಂಡ ತನ್ನ ಹೆಂಡತಿಯೊಂದಿಗೆ ಯಾವ ರೀತಿಯ ಸಂಬಂಧವನ್ನು ಸೃಷ್ಟಿಸುತ್ತಾನೋ ಅದೇ ರೀತಿಯ ಸಂಬಂಧವನ್ನು ಅವನು ವ್ಯಭಿಚಾರಿಯೊಂದಿಗೆ ಸೃಷ್ಟಿಸುತ್ತಾನೆ, ಆದರೆ ಈ ವಿಷಯವು ಅವನ ವ್ಯಭಿಚಾರದ ಪರಿಣಾಮವಾಗಿ ಹುಟ್ಟುವ ರೋಗಗಳು ಹೆಂಡತಿಯ ವಿಷಯದಲ್ಲಿ ಹುಟ್ಟುವುದಿಲ್ಲ ಅಥವಾ ಬಹಳ ವಿರಳವಾಗಿ ಹುಟ್ಟುತ್ತದೆ. ಜಗತ್ತಿನಲ್ಲಿ ಎಷ್ಟು ಜನರು ಸಿಫಿಲಿಸ್ ಅಥವಾ ಗೊನೊರಿಯಾದಿಂದ ಬಳಲುತ್ತಿದ್ದಾರೆ, ಅವರಲ್ಲಿ ಎಷ್ಟು ಜನರು ತಮ್ಮ ಹೆಂಡತಿಯರಿಂದ ಈ ರೋಗವನ್ನು ಸ್ವೀಕರಿಸುತ್ತಾರೆ? ಬಹುಶಃ ನೂರರಲ್ಲಿ ಒಬ್ಬರು ಇಲ್ಲ, ಈ ರೋಗಿಗಳಲ್ಲಿ ನೂರಕ್ಕೆ ತೊಂಬತ್ತೊಂಬತ್ತು ಅಥವಾ ಹೆಚ್ಚಿನ ರೋಗಿಗಳು ವ್ಯಭಿಚಾರದಿಂದ ರೋಗವನ್ನು ಪಡೆಯುತ್ತಾರೆ ಮತ್ತು ಗಂಡ ಅಥವಾ ಹೆಂಡತಿ ಪರಸ್ಪರ ಪಡೆಯುವ ರೋಗವು ಹಿಂದಿನ ವ್ಯಭಿಚಾರದ ಪರಿಣಾಮವಾಗಿದೆ. ಹೀಗೆ **ಸಾಅ ಸಬೀಲ–** ಎಂದು ಹೇಳುವ ಮೂಲಕ ಮನುಷ್ಯನ ಗಮನಕ್ಕೆ ಒಂದು ದೊಡ್ಡ ಸತ್ಯವನ್ನು ಸೆಳೆಯಲಾಗಿದೆ, ಅದು ಎಲ್ಲರ ಮುಂದೆ ಇದೆ, ಆದರೆ ಕೆಲವೇ ಜನರು ಅದನ್ನು ಗಮನಿಸುತ್ತಾರೆ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–328, ಪ್ರಕಟಿತ 2010 ಖಾದಿಯಾನ್)**

### ಆಡಂಬರ ಮತ್ತು ತೋರ್ಪಡಿಕೆಗೊಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ–3, ಪುಟ–284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಹೀಗಾಗಿ ಬ್ರಿಟಿಷರೊಂದಿಗೆ ಯಾವುದೇ ಮೈತ್ರಿ ಮಾಡಿಕೊಳ್ಳುವುದು ಅಸಾಧ್ಯವಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಯಾವ ಜನರು ದೇವರ ಭಯವಿಲ್ಲದೆ ಅನಗತ್ಯವಾಗಿ ನಮ್ಮ ಸಜ್ಜನ ಪ್ರವಾದಿ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ರನ್ನು ಕೆಟ್ಟ ಪದಗಳಿಂದ ನೆನಪಿಸಿಕೊಳ್ಳುವರು, ಮತ್ತು ಅವರ ಮೇಲೆ ಅಪವಿತ್ರವಾದ ಆರೋಪಗಳನ್ನು ಮಾಡುವವರು ಹಾಗೂ ಅಶುದ್ಧ ಪದಗಳನ್ನು ಬಳಸುವವರು, ಕೆಟ್ಟ ಭಾಷೆಯ ಚಾಳಿಯಿಂದ ದೂರ ಇರದವರು, ಅವರೊಂದಿಗೆ ನಾವು ಹೇಗೆ ಮೈತ್ರಿ ಮಾಡಿಕೊಳ್ಳಲು ಸಾಧ್ಯ? ನಾನು ಸತ್ಯವಾಗಿ ಹೇಳುತ್ತೇನೆ, ನಾವು ಗೆದ್ದಲದ ಭೂಮಿಯ ಹಾವುಗಳೊಂದಿಗೆ ಮತ್ತು ಅರಣ್ಯದ ತೋಳಗಳೊಂದಿಗೆ ಮೈತ್ರಿಯನ್ನು ಹೊಂದಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ಪ್ರೀತಿಯ ನಬಿ(ಸ) ಅವರು ನಮಗೆ ನಮ್ಮ ಪ್ರಾಣ ಹಾಗೂ ನಮ್ಮ ತಂದೆ ತಾಯಿಯವರಿಗಿಂತಲೂ ಪ್ರಿಯರಾಗಿದ್ದಾರೆ, ಅವರ ಮೇಲೆ ಅಪವಿತ್ರ ದಾಳಿ ಮಾಡುತ್ತಾರೆ. ಅಲ್ಲಾಹನು ನಮಗೆ ಇಸ್ಲಾಂ ಧರ್ಮದ ಮೇಲೆ ಮರಣವನ್ನು ನೀಡಲಿ. ನಾವು ನಮ್ಮ ನಂಬಿಕೆಗೆ ಚ್ಯುತಿ ಬರುವಂತಹ ಯಾವ ಕೆಲಸವು ಮಾಡಲು ಇಚ್ಛಿಸುವುದಿಲ್ಲ.

**(ಪೈಗ್ವಾಮೆ ಸುಲಹ್, ರೂಹಾನಿ ಖಝಾಇನ್, ಸಂಪುಟ–23, ಪುಟ–459)**

ನಮ್ಮಲ್ಲಿ ಮತ್ತು ಕ್ರಿಶ್ಚಿಯನ್ನರಲ್ಲಿ ಪೂರ್ವ ಪಶ್ಚಿಮದಷ್ಟು ವ್ಯತ್ಯಾಸವಿದೆ. ಯಾವ ಪಾವನ ವ್ಯಕ್ತಿಯನ್ನು ನಾವು ಎಲ್ಲಾ ಸೃಷ್ಟಿಗಳಲ್ಲೂ ಉತ್ತಮರೆಂದು ಭಾವಿಸುತ್ತೇವೆ. ಅವರು ಅವರನ್ನು ಸುಳ್ಳುಗಾರೆನ್ನುತ್ತಾರೆ. ಯಾವ ಅವಸ್ಥೆಯಲ್ಲಿ ನಮ್ಮ ಧರ್ಮ ಮತ್ತು ನಮ್ಮ ಗ್ರಂಥ ಕ್ರಿಸ್ತ ಧರ್ಮವನ್ನು ಅಪವಿತ್ರ ಮತ್ತು ಅಶುದ್ಧ ಎಂದು ಭಾವಿಸುತ್ತದೆ. ಅದು ನಿಜವಾಗಿಯೂ ಹಾಗಿದೆ, ಅಂತಹದರಲ್ಲಿ ನಾವು ಹೇಗೆ ಅವರೊಂದಿಗೆ ಮೈತ್ರಿ ಮಾಡಿಕೊಳ್ಳಲು ಸಾಧ್ಯ. ಕ್ರಿಸ್ತ ಧರ್ಮದವರೊಂದಿಗೆ ನಮ್ಮ ಯಾವ ಸಂಬಂಧವೂ ಇಲ್ಲ.

**(ದಾಫಿಉಲ್ ಬಲಾ, ರೂಹಾನಿ ಖಝಾಇನ್, ಸಂಪುಟ–18, ಪುಟ–24)**

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ರವರಿಗೆ ಅಲ್ಲಾಹನೊಂದಿಗೆ ಮತ್ತು ಅವನ ಗುಣಗಳೊಂದಿಗೆ ಯಾವ ಮಟ್ಟದ ಪ್ರೀತಿ ಇತ್ತೆಂದರೆ ತ್ರೀತ್ವದೊಂದಿಗೆ ಮೈತ್ರಿ ಎಂಬುದು ಒಂದು ಅಸಾಧ್ಯವಾದ ಮಾತಾಗಿತ್ತು.

* ಅವರ ಕ್ರಿಸ್ತರ ದೇವರನ್ನು ಖುರ್‌ಆನ್ ಮತ್ತು ಹದೀಸ್‌ನಿಂದ, ಬೌದ್ಧಿಕ ನೆಲೆಯಲ್ಲಿ ಮತ್ತು ಬೈಬಲ್‌ನಿಂದ ಹಾಗೂ ಐತಿಹಾಸಿಕ ಸಾಕ್ಷ್ಯಗಳೊಂದಿಗೆ ಮೃತಪಟ್ಟ ದೇವರೆಂದು ಸಾಬೀತು ಮಾಡಿದರು. ಅದರಿಂದ ಕ್ರಿಸ್ತರ ಕಟ್ಟಡವು ಬಿದ್ದು ಹೋಯಿತು. ಏಕೆಂದರೆ ಕ್ರಿಸ್ತರ ಬುನಾದಿ ಹಝುರತ್ ಈಸಾ(ಅ) ರವರ ಜೀವಿತವಾಗಿದೆ. ಹಝ್ರತ್ ಈಸಾ(ಅ) ರವರು ಮರಣ ಹೊಂದಿದ್ದಾರೆ ಎಂದು ಒಪ್ಪಿಕೊಂಡರೆ ಕ್ರಿಸ್ತ ಧರ್ಮವೇ ಮರಣ ಹೊಂದುವುದು. ಅವರು (ಅ) ಮುಸಲ್ಮಾನರಿಗೆ ಹೀಗೆ ಸಲಹೆ ನೀಡಿದರು. ಹಝ್ರತ್ ಈಸಾ(ಅ) ರನ್ನು ಮರಣ ಹೊಂದಲು ಬಿಡಿ. ಅದರಲ್ಲೇ ಇಸ್ಲಾಂ ಧರ್ಮದ ಜೀವನವಿದೆ. ಒಂದು ಕಾಲವಿತ್ತು. ಕ್ರಿಸ್ತಪಾದರಿಗಳು ಕೇವಲ ಇದೇ ಅಸ್ತ್ರವಾಗಿಟ್ಟುಕೊಂಡು ಲಕ್ಷಾಂತರ ಮುಸ್ಲಿಮರನ್ನು ಮತಾಂತರಗೊಳಿಸಿದರು, ಅದೇನೆಂದರೆ ಹಝ್ರತ್ ಈಸಾ (ಅ) ಆಕಾಶದಲ್ಲಿ ಜೀವಂತರಾಗಿದ್ದಾರೆ. ಅದಾಗ್ಯೂ, ನಿಮ್ಮ ಪ್ರವಾದಿ ಮುಹಮ್ಮದ್(ಸ) ಮರಣ ಹೊಂದಿ ಭೂಮಿಯಲ್ಲಿ ಸ್ವಸ್ತರಾದರು. ನೀವು ಹೇಳಿ ಯಾರು ಶ್ರೇಷ್ಠರು? ಮುಸಲ್ಮಾನರ ಬಳಿ ಇದಕ್ಕೆ ಯಾವ ಉತ್ತರವೂ ಇರಲಿಲ್ಲ. ಆದರೆ ಇದರ ಹೊರತಾಗಿಯೂ ಮುಸಲ್ಮಾನರಿಗೆ ಬೇಸರವಿದೆ. ಕ್ರಿಸ್ತರ ದೇವರನ್ನು ಮೃತಪಟ್ಟಿದ್ದು ಎಂದು ಏಕೆ ಹೇಳಲಾಗುತ್ತದೆ ಎಂದು.

* ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಈಸಾ(ಅ) ರನ್ನು ಕೇವಲ ಮೃತಪಟ್ಟರು ಎಂದು ಸಾಬೀತುಗೊಳಿಸಲಿಲ್ಲ, ಬದಲು ಅವರ ಗೋರಿಯನ್ನು ಸಹ ಪತ್ತೆ ಹಚ್ಚಿ ತಿಳಿಸಲಾಯಿತು. ಅವರ ಗೋರಿಯ ಶ್ರೀನಗರದ ಖಾನಿಯಾರ ಎಂದು ಮೊಹಲ್ಲದಲ್ಲಿದೆ.

* ಹಝ್ರತ್ ಮಸೀಹ್ ಮೌಊದ್(ಅ) ಎಂತಹ ಪ್ರಬಲ ಸಾಕ್ಷ್ಯಗಳೊಂದಿಗೆ ಕ್ರಿಸ್ತರ ಮೂಲ ವಿಶ್ವಾಸ ತ್ರೀತ್ವ ತತ್ವವನ್ನು ರದ್ದುಗೊಳಿಸಿದರೆಂದರೆ ಕ್ರಿಶ್ಚಿಯನ್ನರ ಕಟ್ಟಡದ ಬುನಾದಿಯೇ ಅಲುಗಾಡಿತು.

* ಹಝ್ರತ್ ಮಸೀಹ್ ಮೌಊದ್(ಅ) ಅವರ ಮೂಲ ವಿಶ್ವಾಸ ಪಾಪ ಪರಿಹಾರ ತತ್ವವನ್ನು ಸಹ ಯಾವ ರೀತಿ ಪ್ರಬಲ ಸಾಕ್ಷ್ಯಗಳೊಂದಿಗೆ ರದ್ದುಗೊಳಿದರೆಂದರೆ ಈ ವಿಶ್ವಾಸವನ್ನು ಛಿದ್ರ ವಿಛಿದ್ರಗೊಳಿಸಿದರು.

* ಕ್ರಿಸ್ತ ಪಾದರಿಗಳೊಂದಿಗೆ ಚರ್ಚಾಕೂಟಗಳನ್ನು ಏರ್ಪಡಿಸಿದರು, ಅವರಿಗೆ ಇಸ್ಲಾಂ ಧರ್ಮ ಮತ್ತು ಖುರ್‌ಆನ್ ಹಾಗೂ ಹಝ್ರತ್ ಮುಹಮ್ಮದ್ ಮಸ್ತಫಾ (ಸ) ರವರ ಸತ್ಯತೆಯನ್ನು ವ್ಯಕ್ತಪಡಿಸಲು ಒಂದರ ಮೇಲೊಂದು ಪಂಥ್ವಾನ ನೀಡಿದರು, ಯಾವ ಪಾದರಿಗೂ ಅವರ (ಅ) ಎದುರಾಗಿ ನಿಲ್ಲಲು ಸಾಧ್ಯವಾಗಲಿಲ್ಲ.

* ಹಝ್ರತ್ ಮಸೀಹ್ ಮೌಊದ್(ಅ) ಪಾದರಿಗಳಿಗೆ ದಜ್ಜಾಲ್ ಎಂದು ಕರೆದರು, ಹೇಳಿದ್ದು ಮಾತ್ರವಲ್ಲ, ಸಾಬೀತುಗೊಳಿಸಿ ತೋರಿಸಿದರು. ಸಾರ್ವಜನಿಕರು ಯಾವ ಚಿತ್ರವಿಚಿತ್ರ ಸೃಷ್ಟಿಯನ್ನು ದಜ್ಜಾಲ್ ಎಂದು ಭಾವಿಸುತ್ತಾರೋ. ಇಂತಹ ಯಾವ ಸೃಷ್ಟಿಯೂ ಇಲ್ಲ. ಬದಲು ಕ್ರಿಸ್ತ ಪಾದರಿಗಳೇ ಇಜವಾದ ದಜ್ಜಾಲಾಗಿದ್ದಾರೆ.

* ಕ್ರಿಸ್ತರ ರಾಣಿ ವಿಕ್ಟೋರಿಯಾರನ್ನು ಅವರು ಇಸ್ಲಾಂ ಧರ್ಮಕ್ಕೆ ಆಹ್ವಾನ ನೀಡಿದರು. ಅವರು (ಅ) ಬರೆದರು. ಅಗ್ರಗಣ್ಯರಾದ ರಾಣಿಯರು ನನ್ನ ಸತ್ಯತೆಗಾಗಿ ನನ್ನಿಂದ ದೃಷ್ಟಾಂತ ಬಯಸುವಿರಾದರೆ, ನನಗೆ ಪೂರ್ಣ ವಿಶ್ವಾಸವಿದೆ. ಇನ್ನು ಒಂದು ವರ್ಷ ಪೂರ್ಣವಾಗಲಿಕ್ಕಿಲ್ಲ. ಆ ದೃಷ್ಟಾಂತ ಗೋಚರಿಸಬಹುದು. ಕುಶಲ ಆರೋಗ್ಯದಿಂದ ಕಳೆಯುವಂತಾಗಲಿ. ಯಾವ ದೃಷ್ಟಾಂತವು ಗೋಚರಿಸದಿದ್ದರೆ, ನಾನು ಸುಳ್ಳುಗಾರರೆಂದಾದರೆ ರಾಣಿಯರ ಸಿಂಹಾಸನದ ಮುಂದೆ ಗಲ್ಲು ಶಿಕ್ಷೆ ನೀಡಿದರೂ ಅದಕ್ಕೆ ಸಿದ್ಧನಾಗಿದ್ದೇನೆ. ಇವೆಲ್ಲಾ ಕಳವಳಕ್ಕೆ ಕಾರಣ. ಹೇಗಾದರೂ ಮಾಡಿ ರಾಣಿ ಯಾರನ್ನು ದೇವರೆಡೆಗೆ ಕರೆ ನೀಡಬೇಕು. ಅದರಿಂದ ಕ್ರಿಸ್ತ ಧರ್ಮ ಅಜ್ಞಾನದಲ್ಲಿದೆ.

**(ತೊಹಫ ಖೈಸರಿಯ, ರೂಹಾನಿ ಖಝಾಇನ್, ಸಂಪುಟ–12, ಪುಟ–278 ಟಿಪ್ಪಣಿ)**

* ಹಝ್ರತ್ ಪೈಗಂಬರ್(ಸ) ಭವಿಷ್ಯವಾಣಿ ನುಡಿದಿದ್ದರು. ಆಗಮಿಸಲಿರುವ ಮಸೀಹರು ಶಿಲುಬೆಯನ್ನು ತುಂಡು ತುಂಡು ಮಾಡುವನು. ಹಂದಿಗಳನ್ನು ಕೊಂದು ಹಾಕುವರು. ಈ ಮಹೋನ್ನತವಾದ ಭವಿಷ್ಯವಾಣಿಯ ಪ್ರಕಾರ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ವಾಸ್ತವವಾಗಿಯೂ ಶಿಲುಬೆಯ ವಿಶ್ವಾಸವನ್ನು ಯಾವ ರೀತಿ ತುಂಡು ತುಂಡು ಮಾಡಿದರೆಂದರೆ ಅದನ್ನು ಈಗ ಜೋಡಿಸಲು ಸಾಧ್ಯವಿಲ್ಲ. ಈ ವಿಶ್ವಾಸಗಳು ಈಗ ನಂಬಲು ಅನರ್ಹವಾಗಿದೆ. ಶಿಲುಬೆಯ ಘಟನೆಯನ್ನು ಇನ್ನೂ ಬೇರೂರಲು ಸಾಧ್ಯವಾಗದ ರೀತಿಯಲ್ಲಿ ಮುರಿದುಹಾಕಲಾಗಿದೆ.

ಈ ಎಲ್ಲಾ ವಿಷಯಗಳು ನಮ್ಮ ಸಾಹಿತ್ಯದಲ್ಲಿ ಬಹಳ ವಿವರವಾಗಿ ಇವೆ. ಆದ್ದರಿಂದ ನಾವು ಅವುಗಳನ್ನು ಸಾಂಕೇತಿಕ ರೂಪದಲ್ಲಿ ಮಾತ್ರ ಸೂಚಿಸಿದ್ದೇವೆ. ಈ ಸತ್ಯಗಳ ಉಪಸ್ಥಿತಿಯಲ್ಲಿ ಬ್ರಿಟಿಷರು ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) ಅವರು ವಾಗ್ದತ್ತ ಮಸೀಹ ಮತ್ತು ಮಹದಿಯನ್ನಾಗಿ ನಿಲ್ಲಿಸಿದ್ದರು ಎಂಬುದು ಎಷ್ಟೊಂದು ಹಾಸ್ಯಾಸ್ಪದದ ಮಾತಾಗಿದೆ. ಬ್ರಿಟಿಷರು ಅವರನ್ನು ಅವರದ್ದೇ ಮೂಲ ವಿಶ್ವಾಸಗಳನ್ನು ಕಿತ್ತು ಹಾಕಲು ನಿಲ್ಲಿಸಿದ್ದರೆ? ಅವರ ದೇವರನ್ನು ಮರಣವಪ್ಪಿದ ದೇವರೆನ್ನಲು ಸ್ಥಾಪಿಸಿದರೆ? ಪುರಾವೆ ಸಾಕ್ಷ್ಯಗಳೊಂದಿಗೆ ಪಾದರಿಗಳು ಜೀವಿಸುವುದೇ ದುಸ್ತರವಾಗಿ ಮಾಡಿಬಿಟ್ಟದ್ದರು. ಆದ್ದರಿಂದ ಇದೊಂದು ನಿರ್ಬಲ, ದುರ್ಬಲ, ಸುಳ್ಳುಗಳಿಂದ ಕೂಡಿದ, ಆಧಾರರಹಿತ ಮತ್ತು ಮೂರ್ಖತನದ ಆರೋಪವಾಗಿದೆ.

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಕ್ರಿಸ್ತರ ವಿರುದ್ಧ ಹೋರಾಡಿದ ಒಂದು ಅಂಶಿಕ ಚಿತ್ರ ಮಾತ್ರ. ನಾವು ಮೇಲೆ ಪ್ರಸ್ತುತಪಡಿಸಿದ್ದೇವೆ. ಮುಂಚಿನ ಸಂಚಿಕೆಯಲ್ಲಿ ಈ ಸಂಬಂಧ ನಾವು ಅವರ (ಅ) ಇನ್ನಷ್ಟು ಅಧ್ಯಾಪನೆಗಳು ಪ್ರಸ್ತುತಪಡಿಸುವೆವು. ಅದರಿಂದ ಸ್ಪಷ್ಟ ರೀತಿಯಲ್ಲಿ ತಿಳಿದುಬರುವುದು. ಅವರ ಈ ಆರೋಪ ಕೇವಲ ಟೊಳ್ಳಾದ, ದುರ್ಬಲ, ಸುಳ್ಳು ಆಧಾರರಹಿತ ಮತ್ತು ಮೂರ್ಖತನದ ಆರೋಪವಾಗಿದೆ. **(ಮನ್ಸೂರ್ ಅಹ್ಮದ್ ಮಸ್ರೂರ್)**

**ತಿದ್ದುಪಡಿ ಪ್ರಕಟಣೆ**

ಬದರ್ ಸಂಚಿಕೆ–35 ದಿನಾಂಕ 31 ಆಗಸ್ಟ್ 2023ರ ಸಂಚಿಕೆಯಲ್ಲಿ ಪುಟ ಸಂಖ್ಯೆ 3ರಲ್ಲಿ ಪ್ರಕಟವಾದ ಜುಮುಅ ಖುತುಬದ ದಿನಾಂಕವು ಕಣ್ತಪ್ಪಿನಿಂದ 21/07/2023 ಪ್ರಕಟವಾಗಿದ್ದು ಅದು 28/07/2023 ಎಂದು ಓದಿಕೊಳ್ಳಬೇಕಾಗಿ ವಿನಂತಿ. **(ಸಂಪಾದಕ)**

"ಖಡ್ಗಗಳಿಂದ ಪ್ರದೇಶಗಳನ್ನು ಜಯಿಸಬಹುದು ಆದರೆ ಹೃದಯಗಳನ್ನಲ್ಲ
ಬಲದಿಂದ ಶಿರಗಳನ್ನು ಬಾಗಿಸಬಹುದು ಆದರೆ ಮನಸ್ಸುಗಳನ್ನಲ್ಲ"
(ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಖಲೀಫತುಲ್ ಮಸೀಹ್ ರಾಬಿ(ರ))

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

"ವಾಗ್ದಾನವನ್ನು ನೆರವೇರಿಸುವುದು ಸತ್ಯವಿಶ್ವಾಸದ ಅಂಶವಾಗಿದೆ"
(ಹಝ್ರತ್ ಮುಹಮ್ಮದ್ ಪೈಗಂಬರ್(ಸ))

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.04, Thursday, 07 September 2023, Issue No. 36

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ–35ರ ಉಳಿದ ಭಾಗ ಮುಂದುವರಿಸಲಾಗಿದೆ)*

### ಹುರ್ಝೂರೆ ಅನ್ವರ್(ಅಬಿಅ) ಅವರ ಭಾಷಣ

ಆರು 6 ಗಂಟೆ 55 ನಿಮಿಷಕ್ಕೆ ಹುರ್ಝೂರೆ ಅನ್ವರ್(ಅಬಿಅ) ಇಂಗ್ಲೀಷ್‌ನಲ್ಲಿ ಅತಿಥಿಗಳನ್ನು ಸಂಬೋಧಿಸಿ ಮಾತನಾಡಿದರು. ಅದರ ಉರ್ದು ಅನುವಾದ ಪ್ರಸ್ತುತಪಡಿಸುತ್ತಿದ್ದೇವೆ. ಅವರು ಬಿಸ್ಮಿಲ್ಲಾಹ್. . ದೊಂದಿಗೆ ತನ್ನ ಭಾಷಣ ಪ್ರಾರಂಭಿಸಿದರು. ಮತ್ತು ಎಲ್ಲ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಂ ವರಹ್ಮತುಲ್ಲಾಹ್ ವ ಬರಕಾತುಹು ಹೇಳಿದರು. ಅನಂತರ ಅವರು ಹೇಳಿದರು

ಪ್ರಪ್ರಥಮವಾಗಿ ಇಂದಿನ ಸಂಜೆ ನಮ್ಮ ಜೊತೆಯಲ್ಲಿರುವವರಿಗೆಲ್ಲ ಕೃತಜ್ಞತೆಗಳನ್ನು ಅರ್ಪಿಸಬಯಸುತ್ತೇನೆ. ಈ ಸಮಾರಂಭ ಲೌಕಿಕ ಸಮಾರಂಬವೇನಲ್ಲ, ಬದಲು ವಿಶೇಷವಾದ ಧಾರ್ಮಿಕ ಸಮಾರಂಭವಾಗಿದೆ. ಅದರ ಆಲೋಚನೆ ಇಂದು ಇಸ್ಲಾಮಿ ಸಂಘಟನೆ ಆಯೋಜಿಸಿರುತ್ತದೆ. ಆದುದರಿಂದ ಈ ಸಮಾರಂಭದಲ್ಲಿ ನಿಮ್ಮ ಉಪಸ್ಥಿತಿ ನಿಮ್ಮ ಹೃದಯ ವೈಶಾಲ್ಯ, ಸಹನೆ ಮತ್ತು ವಿಶಾಲ ದೃಷ್ಟಿಕೋನವನ್ನು ಸೂಚಿಸುತ್ತದೆ. ಆದುದರಿಂದ ಇಂದು ಇಲ್ಲಿ ಝಾಯಿನ್‌ನಲ್ಲಿ ನಮ್ಮ ಹೊಸ ಮಸೀದಿಯ ಉದ್ಘಾಟನಾ ಸಂದರ್ಭದಲ್ಲಿ ನಮ್ಮ ಜೊತೆ ಭಾಗವಹಿಸಿದಕ್ಕೆ ಹೃತ್ಪೂರ್ವಕವಾಗಿ ತಮ್ಮೆಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ಹುರ್ಝೂರೆ ಅನ್ವರ್(ಅಬಿಅ) ಹೇಳಿದರು. ಈ ನಗರದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪನೆಯು ಎಷ್ಟೋ ದಶಕಗಳ ಹಿಂದೆಯೇ ಆಗಿತ್ತು. ಆದರೆ ನಮ್ಮ ಬಳಿ ಅಧೀಕೃತವಾದ ಯಾವುದೇ ಮಸೀದಿ ಆರಾಧನೆ ಮಾಡಲು ಇರಲಿಲ್ಲ. ಆದುದರಿಂದ ಇಂದಿನ ದಿನ ನಮ್ಮ ಜಮಾಅತಿಗೆ ತುಂಬಾ ಮಹತ್ವದ್ದು ಮತ್ತು ಸಂತೋಷದ ದಿನವಾಗಿದೆ. ನಿಶ್ಚಯವಾಗಿಯೂ ಎಲ್ಲ ಧಾರ್ಮಿಕ ಸಂಘಟನೆಗಳಿಗೆ ಇಂತಹದೊಂದು ಸ್ಥಲ ಜನರು ಕೂಡಿ ಆರಾಧನೆ ಮಾಡಲು ಲಭಿಸಿದ್ದು ತುಂಬಾ ಮಹತ್ವದ್ದಾಗಿದೆ. ಅದಕ್ಕೆ ಇಸ್ಲಾಮಿಗೆ ಸಂಬಂಧಿಸಿ ಹೇಳುವುದಾದರೆ ಮಸೀದಿಯಿಂದ ಎರಡು ರೀತಿಯ ಪ್ರಯೋಜನಗಳಿವೆ. ಒಂದನೆಯದಾಗಿ ಮಸೀದಿ ಮುಸಲ್ಮಾನರಿಗೆ ಒಟ್ಟಾಗಿ ಅಲ್ಲಾಹನ ಆರಾಧನೆ ಮಾಡಲು ಮತ್ತು ಧಾರ್ಮಿಕ ಕರ್ತವ್ಯಗಳನ್ನು ಪಾಲಿಸಲು ಸಂದರ್ಭ ಒದಗಿಸಿಕೊಡುತ್ತದೆ. ಉದಾಹರಣೆಗೆ ಮುಸಲ್ಮಾನರಿಗೆ ಐದು ಹೊತ್ತು ಆರಾಧನೆ ಮಾಡುವ ಆಜ್ಞೆಯಿದೆ. ಅದಲ್ಲದೇ ಮಸೀದಿ ನಿರ್ಮಾಣದ ಇನ್ನೊಂದು ಪ್ರಯೋಜನವೆಂದರೆ ಮಸೀದಿಯ ಮೂಲಕ ಸಮಾಜದ ಇತರ ಜನರನ್ನು ಇಸ್ಲಾಮಿನ ಶಿಕ್ಷಣಗಳಿಂದ ಪರಿಚಯಿಸಬಹುದಾಗಿದೆ. ಎಲ್ಲರೂ ಆತ್ಮಪೂರ್ವಕವಾಗಿ ಮಸೀದಿಯಲ್ಲಿ ಆರಾಧನೆ ಮಾಡುವವರಾದರೆ, ಅವರು ನಿಜ ಅರ್ಥದಲ್ಲಿ ಇಸ್ಲಾಮಿ ಶಿಕ್ಷಣವನ್ನು ಬಲ್ಲವರಾದರೆ, ಆ ಶಿಕ್ಷಣವನ್ನು ನಡತೆಯ ಮೂಲಕ ಪ್ರದರ್ಶಿಸಿದಂತಾಗುವುದು, ಸಹಜವಾಗಿಯೇ ಸ್ಥಳೀಯ ಜನರಲ್ಲಿ ಇಸ್ಲಾಮಿನ ಕುರಿತು ಅವರ ಜ್ಞಾನ ವೃದ್ಧಿಯಾಗುವುದು ಮತ್ತು ಮುಸಲ್ಮಾನರು ಶಾಂತಿಯುತವಾಗಿ ವಾಸಿಸುತ್ತಾ ಮತ್ತು ಸಮಾಜದ ಸಕಾರಾತ್ಮಕ ಭಾಗವಾಗುವುದನ್ನು ನೋಡಿ ಅವರ ಹೃದಯಗಳಿಂದ ಭಯ ಹಾಗೂ ಆತಂಕಗಳು ದೂರವಾಗುವುದು. ಇನ್‌ಶಾಅಲ್ಲಾಹ್. ಹಾಗೆ ಈ ಎರಡು ಉದ್ದೇಶಗಳನ್ನು ಪೂರ್ಣಗೊಳಿಸಲು ಅಹ್ಮದಿಯಾ ಜಮಾಅತ್ ಲೋಕದಲ್ಲೆಲ್ಲ ಮಸೀದಿಗಳನ್ನು ನಿರ್ಮಿಸುತ್ತಿದೆ.

ನಿಮ್ಮಲ್ಲಿ ಕೆಲವರು ಅಹ್ಮದಿ ಮುಸಲ್ಮಾನರು ಮತ್ತು ಅಹ್ಮದಿಯೇತರ ಮುಸಲ್ಮಾನರಲ್ಲಿ ಏನು ವ್ಯತ್ಯಾಸವಿದೆ ಎಂದು ಭಾವಿಸುತ್ತಿರಬಹುದು? ಪವಿತ್ರ ಖುರ್‌ಆನ್ ಮತ್ತು ರಸುಲುಲ್ಲಾಹ್(ಸ) ರವರ ಆಧಾರದ ಮೇರೆಗೆ ಮಹತ್ವದಾದೊಂದು ಭವಿಷ್ಯವಾಣಿಯಿದೆ. ಇದು ದೇವವಿಧಿಯಾಗಿತ್ತು. ಶತಮಾನಗಳ ನಂತರ ಮುಸ್ಲಮಾನರು ಇಸ್ಲಾಮಿನ ಶಿಕ್ಷಣದಿಂದ ದೂರವಾಗುವರು. ಅಂತಿಮವಾಗಿ ಮುಸಲ್ಮಾನರ ಬಹುಸಂಖ್ಯೆಯು ಇಸ್ಲಾಮಿ ಶಿಕ್ಷಣವನ್ನು ತ್ಯಜಿಸುವರು ಮತ್ತು ಕೇವಲ ನಾಮಮಾತ್ರಕ್ಕಾಗಿ ಮುಸಲ್ಮಾನರಾಗಿರುವರು. ಅದರ ಜೊತೆಯಲ್ಲಿ ಅಲ್ಲಾಹನು ಮತ್ತು ಅವನ ಪ್ರವಾದಿ ರಸೂಲುಲ್ಲಾಹ್(ಸ) ರವರು ಈ ಸುವಾರ್ತೆಯನ್ನು ನೀಡಿದರು. ಈ ಆಧ್ಯಾತ್ಮಿಕ ಪತನದ ಕಾಲಘಟ್ಟದಲ್ಲಿ ಅಲ್ಲಾಹನು ಇಸ್ಲಾಮಿನ ನಿಜವಾದ ಶಿಕ್ಷಣವನ್ನು ಮತ್ತೊಮ್ಮೆ ಪುನರುತ್ಥಾನಗೊಳಿಸಲು ಓರ್ವ ಸುಧಾಕರನನ್ನು ಕಳುಹಿಸುವನು, ಅವರಿಗೆ ಮಸೀಹ್ ಮುಹಮ್ಮದಿ ಎಂಬ ಬಿರುದು ನೀಡಲಾಗುವುದು. ಆ ಮಸೀಹರು ಲೋಕಕ್ಕೆ ತಿಳಿಸುವರು ಇಸ್ಲಾಮಿ ಶಿಕ್ಷಣವು ಶಾಂತಿ, ಪ್ರೀತಿ ಮತ್ತು ಸಹೋದರತೆಯ ಪಾಠ ನೀಡುತ್ತದೆ. ಆ ಮಸೀದಿಯ ಜನರಿಗೆ ದೃಢಪಡಿಸುವರು, ಪರಸ್ಪರ ಒಟ್ಟುಗೂಡಿ ಶಾಂತಿಯುತವಾದ ಜೀವನ ನಡೆಸಬೇಕು. ಒಬ್ಬರು ಮತ್ತೊಬ್ಬರೊಡನೆ ಭಿನ್ನತೆಗಳ ಹೊರತಾಗಿಯೂ ಪರಸ್ಪರ ಪ್ರೀತಿ ಮತ್ತು ಸ್ನೇಹದ ಸಂಬಂಧ ಸ್ಥಾಪಿಸಬೇಕು. ಹಾಗೆ ಅಹ್ಮದಿ ಮುಸಲ್ಮಾನರಾದ ಕಾರಣ ನಮಗೆ ದೃಢವಾದ ನಂಬಿಕೆ ಇದೆ ಈ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿ(ಅ) ಅವರೇ ಆ ವಾಗ್ದತ್ತ ಮಸೀಹ ಮತ್ತು ಮಹದಿ ಆಗಿರುವರು. ಅವರ ಕುರಿತೇ ಪವಿತ್ರ ಖುರ್‌ಆನ್ ಮತ್ತು ರಸೂಲುಲ್ಲಾಹ್(ಸ) ಬವಿಷ್ಯವಾಣಿ ನುಡಿದಿದ್ದರು.

ಅಹ್ಮದಿಯಾ ಸಂಘಟನೆಯ ಸ್ಥಾಪಕರು ಜೀವನಪೂರ್ತಿ ತನ್ನ ಅನುಯಾಯಿಗಳಿಗೆ ಪ್ರೀತಿ, ಅನುಕಂಪ ಮತ್ತು ಪರೋಪಕಾರ ಆಧಾರಿತ ಇಸ್ಲಾಮಿ ಶಿಕ್ಷಣದ ಪ್ರಕಾರ ನಡೆದುಕೊಳ್ಳುತ್ತ, ಇಸ್ಲಾಮಿನ ಪ್ರಚಾರ ಮಾಡಲು ಮತ್ತು ಜನರ ಹೃದಯಗಳನ್ನು ಗೆಲ್ಲಲು ಉಪದೇಶಿಸಿದರು. ವಾಸ್ತವದಲ್ಲಿ ಹಝುರತ್ ಮಸೀಹ್ ಮೌಊದ್(ಅ) ಘೋಷಿಸಿದರು, ಅವರು ಮೂಸವಿ ಮಸೀಹರ ಮಾದರಿಯಲ್ಲೇ ಇಸ್ಲಾಮಿ ಶಿಕ್ಷಣವನ್ನು ಹರಡುವರು. ಹಾಗೆ ಹಝ್ರತ್ ಈಸ(ಅ) (Jesus) ಮಾದರಿಯಲ್ಲೇ ಹಝ್ರತ್ ಮಸೀಹ್ ಮೌಊದ್ (ಅ) ಮಾನವ ಕುಲದೊಂದಿಗೆ ಅನುಕಂಪ ಮತ್ತು ಪ್ರೀತಿ ವ್ಯಕ್ತಪಡಿಸಿದರು. ಅವರ ಒಂದೊಂದು ಅಕ್ಷರವು ಮತ್ತು ನಡೆ ಶಾಂತಿಯನ್ನು ಸ್ಥಾಪಿಸಲು ಮತ್ತು ಸಮಾಜದಲ್ಲಿ ಪರಸ್ಪರ ಸಹೋದರತ್ವ ಉಂಟುಮಾಡುವುದಾಗಿತ್ತು. ಅವರು ತಮ್ಮ ಅನುಯಾಯಿಗಳಿಗೆ ಉಪದೇಶ ನೀಡಿದರು. ಇಸ್ಲಾಮಿನ ನಿಜವಾದ ಅರ್ಥವೇ ಶಾಂತಿ ಮತ್ತು ರಕ್ಷಣೆಯಾಗಿದೆ. ಅವರ ಆಗಮನದ ನಂತರ ಇಸ್ಲಾಮ್ ತನ್ನ ವಾಸ್ತವಿಕ ರೂಪದೆಡೆ ಮರಳುವುದು ಮತ್ತು ಒಂದು ದಿನ ಲೋಕವು ಇಸ್ಲಾಮ್ ಧರ್ಮವನ್ನು ಒಂದು ಪ್ರೀತಿಸುವ, ಸ್ನೇಹದ, ಸಹಿಷ್ಣುತೆಯ, ಸಹೋದರತೆಯ ಮತ್ತು ಶಾಂತಿಯ ಧರ್ಮ ಎಂದು ತಿಳಿಯುವುದು. ಹಝುರತ್ ಮಸೀಹ್ ಮೌಊದ್(ಅ) ಸ್ಪಷ್ಟಪಡಿಸಿದರು. ಖುರ್‌ಆನ್ ಶಿಕ್ಷಣದನ್ವಯ ಇಸ್ಲಾಮಿನ ಪ್ರಾರಂಭದಲ್ಲಿ ಮಾಡಲಾದ ಯುದ್ಧಗಳೆಲ್ಲ ಕೇವಲ ರಕ್ಷಣಾತ್ಮಕವಾಗಿದ್ದವು ಮತ್ತು ಭೀಕರವಾದ ಹಿಂಸೆಯನ್ನು ತಡೆಯಲು ಆಗಿತ್ತು. ರಸೂಲುಲ್ಲಾಹ್ (ಸ) ರವರ ಪವಿತ್ರ ಕಾಲ ಅಥವಾ ಅವರ ನಂತರ ಖಲಿಫರ ಕಾಲಗಳಲ್ಲಿ ಒಂದೇ ಒಂದು ಸಲ ಇಸ್ಲಾಮಿ ಸೈನ್ಯ ಖುದ್ದು ಮುಂದಾಗಿ ಯುದ್ಧ ಮಾಡಿದ ಉದಾಹರಣೆ ಇಲ್ಲ. ಅಥವಾ ಯಾವುದೇ ರೀತಿಯ ಅತ್ಯಾಚಾರ ಅಥವ ಅನ್ಯಾಯವಾಗಲಿ ಬದಲು ಯಾವಾಗಲೆಲ್ಲ ಯುದ್ಧಗಳಲ್ಲಿ ಮುಸಲ್ಮಾನರು ಯುದ್ಧದಲ್ಲಿ ಭಗವಹಿಸಿದ್ದೆ ಆದರೆ ಅದರ ಉದ್ದೇಶ ಹಿಂಸೆ ಬರ್ಬರತೆ ಅಂತ್ಯ ಮಾಡುವುದೇ ಆಗಿತ್ತು.

*(ಪುಟ ಸಂಖ್ಯೆ–09ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.